## ಅಲ್ಪ ಕಾಲಾವಧಿ ಚರ್ಚೆ–ನಿಯಮ 68ರ ಮೇರೆಗೆ

ವಿಷಯ : ಬೆಂಗಳೂರು ಉತ್ತರ ತಾಲ್ಲೂಕಿನ ಕೌಚರಕನಹಳ್ಳಿಯಲ್ಲಿ ಕೆಲವು ಮನೆಗಳನ್ನು ಕೆಡವಿದ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ನಿಯಮಾವಳಿ 68ರ ಪ್ರಕಾರ ನಾನು ಈ ವಿಷಯವನ್ನು ಚರ್ಚೆಗಾಗಿ ತಮ್ಮ ಮುಂದಿಡುತ್ತಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಸಹ ಈಗ ನಮ್ಮ ಮುಂದಿದ್ದಾರೆ. ಬೆಂಗಳೂರು ನಗರಕ್ಕೆ ಹೊಂದಿಕೊಂಡಂತೆ ಕಾಚರಕನಹಳ್ಳಿ, ಕಾಮನಹಳ್ಳಿ, ಸುಬ್ಬಯ್ಯನ ಪಾಳ್ಯ, ಬಾಣಸವಾಡಿ, ಕರಿಯನಪಾಳ್ಯ ಇತ್ಯಾದಿ ಗ್ರಾಮಗಳು ಇವೆ. ಈ ಗ್ರಾಮಗಳು ಎಲ್ಲವೂ ಕೂಡ ಗ್ರಾಮ ಪಂಚಾಯತಿಗಳ ವ್ಯಾಪ್ತಿಗೆ ಬರತಕ್ಕ ಪ್ರದೇಗಶಳು. ಇಲ್ಲಿ ವಾಸ ಮಾಡತಕ್ಕ ಜನ ಅನೇಕ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮನೆಗಳನ್ನು ಯಾವ ರೀತಿ ಕಟ್ಟಿದ್ದಾರೆಂಬುದನ್ನು ಈ ಸದನದ ಒಂದು ಸಮಿತಿ ಹೋಗಿ ನೋಡಿದರೆ ಒಳ್ಳೆಯದು. ಅದರಲ್ಲಿ ಎಲ್ಲಾ ಪಕ್ಷದವರು ಇದ್ದರೆ ಒಳ್ಳೆಯದು. ಆರ್. ಸಿ. ಸಿ. ಬಿಲ್ಡಿಂಗ್‌ಗಳು ಕೂಡ ಇವೆ. ಒಂದೊಂದು ಕಟ್ಟಡಗಳು ಕೂಡ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಟ್ಟಡಗಳು ಆಗಿವೆ. ಸಿಮೆಂಟಿನಿಂದ, ಕಲ್ಲಿನಿಂದ ಕಟ್ಟಿರತಕ್ಕ ಕಟ್ಟಡಗಳು ಆಗಿವೆ. ಈ ರೀತಿ ಇರತಕ್ಕ ಮನೆಗಳು ಏನಿವೆ ಇವು ನಾವು ಪ್ರಸ್ತಾಪ ಮಾಡಿರತಕ್ಕ ಬಾಣಸವಾಡಿ, ಕಾಮನಹಳ್ಳಿ, ಸುಬ್ಬಯ್ಯನ ಪಾಳ್ಯದಲ್ಲಿ ಮಾತ್ರವಲ್ಲ ಬೆಂಗಳೂರು ನಗರದ ಸುತ್ತ ಮುತ್ತ ಇನ್ನೂ ಅನೇಕ ಪ್ರದೇಶಗಳಲ್ಲಿವೆ. ಆದರೆ ನಾವು ಆಗಲೇ ಹೇಳಿದ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿ ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇವೆ. ಎಮ್. ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಪಕ್ಕದಲ್ಲಿ ಇರುವ ಚಿಕ್ಕಮಾರೇನಹಳ್ಳಿಯ ವಿಚಾರ ಎಲ್ಲರಿಗೂ ಗೊತ್ತಿದೆ. ಅದೊಂದು ದೊಡ್ಡ ಪ್ರಕರಣ, ಅದಕ್ಕೆ ನೀವು ಬುಲ್ಡೋಜರನ್ನು ಪ್ರಯೋಗ ಮಾಡಿ ಅಲಿದ್ದಂತಹ ಮನೆಗಳನ್ನು ತೆಗೆದಿರಿ. ಆಮೇಲೆ ಹೋಗಿ ನೋಡಿಕೊಂಡು ಸಹ ಬಂದಿರಿ. ಒಂದು ಬುಲ್ಡೋಜರಿಗೆ ಜನರು ಬೆಂಕಿ ಹಾಕಿ ನಿಲ್ಲಿಸಿದ್ದರು. ಅದನ್ನು ನಾವೆಲ್ಲ ಹೋದಾಗ ನೋಡಿದೆವು. ಅದೇ ರೀತಿ ಎಲ್ಲೆಲ್ಲಿ ಮನೆಗಳನ್ನು ಕಟ್ಟಿದ್ದಾರೆ ಅವೆಲ್ಲವೂ ಕೂಡಾ ಕನ್‌ವರ್ಷನ್ ಆಗದೆ ಇರುವ ಜಾಗದಲ್ಲಿ ಕಟ್ಟಿರತಕ್ಕ ಮನೆಗಳಾಗಿವೆ. ಅವುಗಳನ್ನು ಕಟ್ಟುವುದಕ್ಕೆ ಕಾರಣ ಇದೆ. ಈ ವಿಚಾರವನ್ನು ನಾವು ಹೇಳಬೇಕಾದರೆ, ನಿಮ್ಮ ಮೇಲೆ ಬರೀ ತಪ್ಪನ್ನು ಹೊರಿಸಬೇಕು ಅಥವಾ ಗೂಬೆ ಕೂರಿಸಬೇಕೆಂಬ ಉದ್ದೇಶ ಇಲ್ಲ. ಸಮಸ್ಯೆ ಬೃಹದಾಕಾರವಾಗಿ ಬೆಳೆದಾಗ ಮೂಲಭೂತವಾಗಿ ವಿಷಯಗಳನ್ನು ಅವಲೋಕನ ಮಾಡಿ ನಾವು ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕು. ಈ ವಿಚಾರವನ್ನು ಉತ್ತರದಲ್ಲಿ ಹೇಳಬೇಕು. ಈಗ ಜನತಾ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಮನೆಗಳನ್ನು ಕೆಡುವತಕ್ಕದ್ದು ಅಥವಾ ಪ್ರಾಧಿಕಾರದ ನಿಯಮಾವಳಿ ಪ್ರಕಾರ ಯಾವುದೇ ಕಾರ್ಯಕ್ರಮ ಹಾಕತಕ್ಕದ್ದು ಅಥವಾ ಸರ್ಕಾರದ ನಿಯಮಾವಳಿ ಪ್ರಕಾರ ಕಾರ್ಯಕ್ರಮ ಹಾಕತಕ್ಕದ್ದು ನಡೆಯುತ್ತಿದೆ. ಇದು ಹಿಂದೆ ಇದ್ದ ಸರ್ಕಾರದಲ್ಲಿ ಕೂಡ ಇತ್ತು. ಅದಕ್ಕೋಸ್ಕರ ಮೂಲಭೂತವಾಗಿ ಹೇಳುತ್ತಿದ್ದೇನೆ. ನಿಮ್ಮ ತಪ್ಪನ್ನು ಹುಡುಕಬೇಕೆಂದು ಹೇಳುತ್ತಿಲ್ಲ. ಕಾರಣವೇನೆಂದರೆ, ಈ ತಪ್ಪನ್ನು ಮಾಡಿರುವವರು ನೀವು ಒಬ್ಬರೇ ಅಲ್ಲ. ಅಥವಾ ಕಾಂಗ್ರೆಸ್ಸಿನವರು ಒಬ್ಬರೇ ಅಲ್ಲ. ಬಹಳ ದಿನಗಳಿಂದ ಈ ರೀತಿ ಮನೆಗಳನ್ನು ಕಟ್ಟತಕ್ಕ ಪ್ರವೃತ್ತಿ ಇದೆ. ಇದಕ್ಕೆ ಕಾರಣವೂ ಇದೆ. ಹಿಂದೆ ಟ್ರಸ್ಟ್ ಬೋರ್ಡ್ ಎಂಬುದು ಇತ್ತು. ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿದ್ದೀರಿ. ಟ್ರಸ್ಟ್ ಬೋರ್ಡ್ ಬಗ್ಗೆ ವಾಸ್ತವಾಂಶವನ್ನು ಮರೆಮಾಚಿ ಮಾತನಾಡಬೇಕಾಗಿಲ್ಲ. ಸೈಟುಗಳಿಗೆ ಅರ್ಜಿ ಹಾಕಿದಾಗ, ಏತಕ್ಕೋಸ್ಕರ ಹಾಕುತ್ತೀರಿ, ಮನೆ ಕಟ್ಟುತ್ತೀರಾ ಎಂಬ ಪ್ರಶ್ನೆ ಹಾಕಿದರೆ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ, ಬೆಳಕು ಚೆಲ್ಲುವುದಕ್ಕೆ ಅನುಕೂಲವಾದೀತೆಂಬುದು ನನ್ನ ಭಾವನೆ. ಬಡವರು ಬೆಂಗಳೂರು ನಗರದ ಮಧ್ಯೆ ಸ್ವಂತ ಆಸ್ತಿ ಹೊಂದಿರುವವರು ಬಹಳ ಕಡಿಮೆ. ಬಹಳ ಬೃಹದಾಕಾರವಾಗಿ ಮತ್ತು ವೇಗವಾಗಿ ಬೆಳೆಯತಕ್ಕ ನಗರಗಳಲ್ಲಿ ಬೆಂಗಳೂರು ನಗರವೂ ಒಂದು. ಬಿ. ವಿ. ಕೆ. ಐಯಂಗಾರ್ ರಸ್ತೆ ಅಥವಾ ಸಣ್ಣಪುಟ್ಟ ಗಲ್ಲಿಗಳೂ ಇವೆ. ಅಲ್ಲಿ ಸಣ್ಣ ಪುಟ್ಟ ಮನೆ ಮಾಡಿಕೊಂಡು ತಾತನ ಕಾಲದಿಂದ ಇರುವವರೂ ಇದ್ದಾರೆ. ಅವರು ಬಿಟ್ಟು ಹೋಗದಿರುವುದಕ್ಕೆ ಕಾರಣಗಳು ಇವೆ.

ಬೆಂಗಳೂರು ನಗರ ಬಹಳ ಬೇಗ ಬೆಳೆಯುತ್ತಿರತಕ್ಕ ನಗರ. ದಿನನಿತ್ಯ ನೂರಾರು ಸಂಸಾರಗಳು ಬೆಂಗಳೂರಿಗೆ ಬಂದು ನೆಲೆ ಊರುತ್ತಿದ್ದಾರೆ. ಬಂದಿರುವವರಿಗೆ ಬಾಡಿಗೆ ಮನೆ ಸಿಗುವುದಿಲ್ಲ. ಸ್ವಂತ ಮನೆ ಕಟ್ಟಿಸಿಕೊಳ್ಳುವುದಕ್ಕೆ ಬ್ಯಾಂಕುಗಳ ಮೂಲಕ ಸಹಕಾರ ಸಂಘಗಳ ಮೂಲಕ ಸಾಲವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಸಿರುತ್ತಾರೆ. ಬ್ಯಾಂಕುಗಳು ಮತ್ತ ಸಹಕಾರ ಸಂಘಗಳಲ್ಲದೆ, ಬೇರೆ ಬೇರೆ ಹಣಕಾಸಿನ ಸಹಾಯ ಮಾಡುವ ಏಜೆನ್ಸಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಜನ ಉಪಯೋಗ ಮಾಡಿಕೊಂಡಿದ್ದಾರೆ. ಟ್ರಸ್ಟ್‌ಬೋರ್ಡಿಗೆ ಸೈಟಗೆ ಅರ್ಜಿ ಹಾಕಿದರೆ ಎಲ್ಲರಿಗೂ ಸೈಟು ಸಿಗುವುದಿಲ್ಲ ಎಂಬ ಮಾತನ್ನು ಒಪ್ಪಿದರೂ ಕೂಡ, ಹೆಚ್ಚು ಲಂಚ ಕೊಟ್ಟವರಿಗೆ ಸಿಗುತ್ತದೆ ಎಂಬುದನ್ನು ಅಲ್ಲಗೆಳೆಯುವುದ

ಕ್ಕಾಗುವುದಿಲ್ಲ. ನಾವಾಗಲೀ, ನೀವಾಗಲೀ, ಇದನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. ಇರತಕ್ಕ ವಿಚಾರ ಇದು, ಬಿ. ಡಿ. ಎ. ನಲ್ಲಾಗಲೀ, ಟ್ರಸ್ಟ್ ಬೋರ್ಡಿನಲ್ಲಾಗಲೀ, ಲಂಚ ಇಲ್ಲ ಎಂದು ಹೇಳುವುದಕ್ಕಾಗುತ್ತದೆಯೆ ? ಲಂಚದ ವಿಚಾರ ಬರೀ ಬಿ. ಡಿ. ಎ. ಅಥವಾ ಟ್ರಸ್ಟ್ ಬೋರ್ಡಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ. ಅದು ತನ್ನ ಕರಾಳ ಛಾಯೆಯನ್ನು ಎಲ್ಲ ಇಲಾಖೆಗಳಿಗೆ ಬೀರಿರತಕ್ಕ ವಿಚಾರ ಎಲ್ಲರಿಗೂ ಗೊತ್ತಿದೆ. ಆದರೆ ಈ ಇಲಾಖೆಯ ವಿಚಾರ ಈಗ ಬಂದಿದ್ದರಿಂದ ಇದನ್ನು ಈ ಇಲಾಖೆಗೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆ. ಯಾರಿಗೆ ಲಂಚ ಕೊಡತಕ್ಕ ಶಕ್ತಿ ಇರುತ್ತದೆ, ಯಾರಿಗೆ ಸಾಲ ಮಾಡದೆ ಲಂಚ ಕೊಡತಕ್ಕ ಶಕ್ತಿ ಇರುತ್ತದೆ ಅವರು ಸೈಟನ್ನು ಪಡೆಯುತ್ತಾರೆ. ಬಿ.ಡಿ.ಎ. ಸದಸ್ಯರು ಟ್ರಸ್ಟ್ ಬೋರ್ಡ್ ಸದಸ್ಯರು ಮತ್ತು ಅಧಿಕಾರಿಗಳ ಮೇಲೂ ಇದೇರೀತಿ ಅಪಾದನೆಗಳು ಬಂದಿವೆ. ಲಂಚ ಕೊಡತಕ್ಕ ಶಕ್ತಿಯನ್ನು ಯಾರು ಕಳೆದುಕೊಂಡಿರುತ್ತಾರೋ ಅವರಿಗೆ ಸೈಟು ಸಿಗುವುದಿಲ್ಲ. ಸರ್ಕಾರ ಮಂಜೂರು ಮಾಡಿರತಕ್ಕ ಮನೆ ನಿವೇಶನವನ್ನು ಕಾನೂನು ಪ್ರಕಾರ ನಿಗದಿಯಾಗಿರತಕ್ಕ ಬೆಲೆಗೆ ಪಡೆಯುವುದಕ್ಕೆ ನಮ್ಮಿಂದ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಇದು ವಾಸ್ತವಾಂಶ. 1945ನೇ ಇಸವಿಯಲ್ಲಿ ಟ್ರಸ್ಟ್ ಬೋರ್ಡ್ ರಚನೆಯಾಯಿತು. ಸಬ್ಜೆಕ್ಟ್ ಟು ಕರೆಕ್ಷನ್ ನಾನು ಹೇಳುತ್ತಿದ್ದೇನೆ. ಅನೇಕ ಜನರು ಊರಿನ ಪಕ್ಕದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಆದರೆ ಬಡವರಿಗೆ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಒಂದು ಜಾಗವನ್ನು ಕೊಡತಕ್ಕ ತೀರ್ಮಾನವನ್ನು ಇನ್ನೂ ಮಾಡುವುದಕ್ಕಾಗಿಲ್ಲ. ಈಗಿರತಕ್ಕ ಸ್ಕೀಟ್ ಕೊಡತಕ್ಕ ವ್ಯವಸ್ಥೆಯಲ್ಲಿ ಇದು ಸಾಧ್ಯವಾಗಿಲ್ಲ.

ಶ್ರೀ ಎಂ. ಚಂದ್ರಶೇಖರ್.—1320 ಸೈಟುಗಳು ಮೊನ್ನೆ ಹಂಚಿಕೆಯಾಗಿದೆಯಲ್ಲ ಅದರ ಬಗ್ಗೆ ಸಾರ್ವಜನಿಕರಿಂದ ಮೆಚ್ಚುಗೆ ಬಂದಿದೆ. ಮೊನ್ನೆ ನಡೆದ ಹಂಚಿಕೆಯಲ್ಲಿ ತಾವು ಹೇಳಿದಂಥ ಅಂಶ ಇಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಸಾರ್ವಜನಿಕ ಲೆಕ್ಕಪತ್ರ ಸಮಿತಿ ವರದಿಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಸಲ್ಲಿಸಿದ್ದಾರಲ್ಲ ಅದು ಬಿ.ಡಿ.ಎ. ವ್ಯವಹಾರದ ಬಗ್ಗೆ ತಾನೆ ? ಮಾರ್ಚ್ 20ನೇ ತಾರೀಖು ಮಾನ್ಯ ವಿರೋಧಪಕ್ಷದ ನಾಯಕರು ಸಲ್ಲಿಸಿರುವ ವರದಿಯನ್ನು ನೋಡಿದರೆ ಅದು ಹೇಗೆ ಕೆಲಸ ಮಾಡಿದೆ ಎಂಬುದು ಚೆನ್ನಾಗಿ ಗೊತ್ತಾಗಿದೆ. ಈ ಸರ್ಕಾರ ಬಂದಮೇಲೆ, ತಾವು ಮಂತ್ರಿಗಳಾದಮೇಲೆ ಹೇಗೆ ನಡೆದಿದೆ ಎಂಬುದು ವರದಿಯಲ್ಲಿದೆ. ಆ ಕಮಿಟಿಯಲ್ಲಿ ತಮ್ಮ ಪಕ್ಷದವರೂ ಇದ್ದಾರೆ. ಅವರೂ ಸೇರಿ ವರದಿ ಕೊಟ್ಟಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಕ್ರಮ ಅನುಸರಿಸಿದ ಬಗ್ಗೆ ನಾನು ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯಕ್ಕೂ ಬರುತ್ತೇನೆ.

ಶ್ರೀ ಪಿ. ತಿಪ್ಪಯ್ಯ.—ಲಾಟರಿ ವ್ಯವಸ್ಥೆಯಲ್ಲಿ ಹಂಚುವಾಗ ಲಂಚ ಎಲ್ಲಿ ತೆಗೆದುಕೊಳ್ಳುವುದಕ್ಕಾಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕಿಲ್ಲಾ ಬೇರೆ ವ್ಯವಹಾರ ಇದೆ. ಲಾಟರಿ ವಿಚಾರ ಹಿಡಿದುಕೊಂಡು ಕಿರೀಟ ಕೂರಿಸುವುದಕ್ಕಾಗುವುದಿಲ್ಲ. ಬೇರೆ ಕೆಲವು ವಿಚಾರಗಳೂ ಇವೆ. ಲಾಟರಿ ಸಿಸ್ಟಂನಲ್ಲಿ ಕೊಟ್ಟರೆ ಲಂಚಕ್ಕೆ ಅವಕಾಶವಿರುವುದಿಲ್ಲ ಎಂಬುದನ್ನು ಒಪ್ಪುತ್ತೇನೆ. ಆದರೆ ಅದೇ ವಿಚಾರವನ್ನು ತೆಗೆದುಕೊಂಡು ಕಿರೀಟ ಕೂರಿಸುವುದಕ್ಕಾಗುವುದಿಲ್ಲ. ಬೇರೆ ಕೆಲವು ವಿಚಾರಗಳಿವೆ. ಉದಾಹರಣೆಗೆ ರಾಜಾಜಿನಗರದಲ್ಲಿ ಒಂದು ಹಳ್ಳಿ ಇದೆ. ಸಾಣಿ ಗುರುವಿನ ಹಳ್ಳಿ ಎಂದು ಅದರ ಹೆಸರು. ನಾನು ಕಂದಾಯ ಮಂತ್ರಿಯಾಗಿದ್ದಾಗ 20 ಅಂಶದ ಕಾರ್ಯಕ್ರಮದ ಪ್ರಕಾರ ಬಡವರಿಗೆ ಸೈಟ್ ಕೊಡುವ ಕಾರ್ಯಕ್ರಮದಲ್ಲಿ ಸೈಟ್‌ಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೆ. ಈಗ ಊರು ಬೆಳೆದುಕೊಂಡು ಹೋಗಿರುವುದರಿಂದ ಆ ಜಾಗ ನಗರದ ಮಧ್ಯಭಾಗವಾಗಿದೆ. ಈಗ ಒಂದು ಸೈಟಿಗೆ 20-30 ಸಾವಿರ ರೂಪಾಯಿ ಬೆಲೆ ಆಗುತ್ತದೆ ಬಡವರು ನಿವೇಶನದ ಮಾಲೀಕರಾದರೆ ನನಗೆ ಸಂತೋಷ. ಆದರೆ ಬಿ.ಡಿ.ಎ.ನಲ್ಲಿ ಲಂಚದ ಹಾವಳಿ ಜಾಸ್ತಿಯಾಗಿರುವುದರಿಂದ ಬಡವರಿ ಬೆಂಗಳೂರು ನಗರದಲ್ಲಿ ನಿವೇಶನ ಸಿಗುವುದಿಲ್ಲವೆಂದು ಅನೇಕ ಜನ ಕಾರ್ಖಾನೆ ಕಾರ್ಮಿಕರು, ಮೂರು ಮತ್ತು ನಾಲ್ಕನೇ ದರ್ಜೆ ನೌಕರರು, ತರಕಾರಿ, ಹೂವು ಮಾರುವವರು, ದೀನದಲಿತರು ಮಧ್ಯಮವರ್ಗದವರು ಊರಿನ ಪಕ್ಕದಲ್ಲಿರುವ ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಸೈಟಿಗೆ ಅರ್ಜಿ ಕೊಟ್ಟು ಕೊಟ್ಟು ನಿವೇಶನ ಸಿಗದಿರುವುದರಿಂದ ಅವರು ಆ ರೀತಿ ಮಾಡಿದ್ದಾರೆ. ಭೂ ಮಾಲೀಕರೂ ಹಣ ಆಸೆಗಾಗಿ ಮಾರಾಟ ಮಾಡಿ ಪ್ರೈವೇಟ್ ಲೇ ಔಟಿಗೆ ಅವಕಾಶ ಮಾಡಿಕೊಡುತ್ತಾರೆ. ಇದು ಕಾನೂನಿನ ಕಣ್ಣಿನಲ್ಲಿ ದುರ್ವ್ಯವಹಾರ ಆದರೂ ನನ್ನ ಪ್ರಕಾರ ನ್ಯಾಯದ ಕಣ್ಣಿನಲ್ಲಿ ನ್ಯಾಯವಾದ ವ್ಯವಹಾರ ಎಂದು ಎಂದು ಹೇಳುತ್ತೇನೆ. ರೆವಿನ್ಯೂ ಭೂಮಿ ಮಾಲೀಕರು

ಹಣದ ಆಸೆಗಾಗಿ ಮಾರಿದ್ದರೂ ಬೃಹದಾಕಾರವಾಗಿ ಬೆಳೆಯುತಕ್ಕ ಬೆಂಗಳೂರು ನಗರದಲ್ಲಿ ಈ ರೀತಿ ಮಾಡಿದ್ದರೆ ಅದನ್ನು ತಪ್ಪು ಎಂದು ಹೇಗೆ ಹೇಳುವುದಕ್ಕಾಗುತ್ತದೆ ? ಬೆಳೆಯುತಕ್ಕ ಬೆಂಗಳೂರು ನಗರದಲ್ಲಿ ನಿವೇಶನ ಕೊಡತಕ್ಕ ಕಾರ್ಯಕ್ರಮವನ್ನು ತ್ವರಿತವಾಗಿ ನಡೆಸದಿದ್ದರೆ, ಬಾಡಿಗೆಗೂ ಮನೆಗಳು ಸಿಗದಿದ್ದರೆ ಸ್ವಂತ ಮನೆ ಕಟ್ಟಿಕೊಳ್ಳುವುದಕ್ಕೂ ನಿವೇಶನ ಸಿಗದಿದ್ದರೆ ಏನು ಮಾಡಬೇಕು ? ಆದ್ದರಿಂದಲೇ ಈ ರೆವಿನ್ಯೂ ನಿವೇಶನಗಳ ಕನ್‌ವರ್ಷನ್ ವಿಚಾರದಲ್ಲಿ ಅಕ್ಟೋಬರ್ 1980ರಲ್ಲಿ ಒಂದು ಆರ್ಡಿನೆನ್ಸ್ ಅನ್ನು ನಾನು ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ತಂದೆ. ತಹಸೀಲ್ದಾರರಿಗೆ ಅರ್ಜಿ ಕೊಟ್ಟು, ಕನ್‌ವರ್ಷನ್ ಚಾರ್ಜ್ ಕಟ್ಟಿದ ಟ್ರೆಜರಿ ಚಲನ್ ಸೇರಿಸಿ ಕೇಳಿಕೊಂಡರೆ ಆಟೋಮೆಟಿಕ್ಕಾಗಿ ಕನ್‌ವರ್ಷನ್ ಆಗುತ್ತದೆ ಎಂದು ಕಾನೂನು ತಂದೆ. ಸಿವಿಲ್ ಡಿಸ್‌ಪ್ಯೂಟ್ಸ್, ಬೇರೆ ರೀತಿಯ ಡಿಸ್‌ಪ್ಯೂಟ್ ಬರತಕ್ಕ ವಿಚಾರ ಬಿಟ್ಟು ಮಿಕ್ಕ ವಿಚಾರಗಳಲ್ಲಿ ಈ ರೀತಿ ಮಾಡಬಹುದು ಎಂದು ಮಾಡಿದ್ದೆ. ನಾನು ರಾಜೀನಾಮೆ ಕೊಟ್ಟು ಬಂದಮೇಲೆ ರೀಪ್ಲೇಸಿಂಗ್ ಬಿಲ್ ತರಲಿಲ್ಲ. ಅದು ಲ್ಯಾಪ್ಸ್ ಆಯಿತು.

ಶ್ರೀ ಚಂದ್ರಶೇಖರ್.—ತಾವು ಏನು ಸುಗ್ರೀವಾಜ್ಞೆ ತಂದಿದ್ದಿರಿ ಅದರ ಪರಿಣಾಮವೇ ಬೆಂಗಳೂರಿನ ಸುತ್ತಮುತ್ತ ಅನಧಿಕೃತ ಬಡಾವಣೆ ಆಗುವುದಕ್ಕೆ ಕಾರಣವಾಗಿದೆ. ಈ ಕಾನೂನನ್ನು ಮುಂದುವರೆಸ ಬಾರದೆಂದು ಈ ಮನೆಯಲ್ಲಿ ವಿರೋಧ ಮಾಡಿರುವುದು ನಡವಳಿಕೆಯಲ್ಲಿ ಇದೆ. ತಾವು ಒಳ್ಳೆಯ ಉದ್ದೇಶ ದಿಂದ ತಂದಿದ್ದಿರಿ. ಉದ್ದೇಶವೇನೋ ಒಳ್ಳೆಯದು. ಆದರೆ ಅದರ ಉಪಯೋಗ ಬೇರೆ ರೀತಿಯಾಗಿ ಅನಧಿಕೃತ ಕಟ್ಟಡಗಳು ಬರುವುದಕ್ಕೆ ಕಾರಣವಾಯಿತು. 1980ರಲ್ಲಿ ತಾವು ಸುಗ್ರೀವಾಜ್ಞೆ ತಂದಿರಿ. ಆರು ತಿಂಗಳೊಳಗೆ ಇದರಿಂದ ಇಲ್ಲಸಲ್ಲದ ಅನಾಹುತವಾಯಿತು. ನಾನು ತಾವು ಕಾನೂನು ತಂದ ಉದ್ದೇಶ ತಪ್ಪು ಎಂದು ಹೇಳುವುದಿಲ್ಲ. ಆದರೆ ಆಗಿರುವಂಥ ಅನಾಹುತದ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅನಾಹುತ ಏನು ಹೇಳಿ.

ಶ್ರೀ ವೈ. ರಾಮಕೃಷ್ಣ.—ರೆವಿನ್ಯೂ ಮಿನಿಸ್ಟರ್ ಆಗಿದ್ದಾಗ ಬಂಗಾರಪ್ಪನವರು ಈ ಕಾನೂನನ್ನು ತಂದಿದ್ದು ನಿಜ. ಆದರೆ ಆಗಿನ ವಿರೋಧಪಕ್ಷದ ನಾಯಕರಾದ ದೇವರಾಜ ಅರಸರು ಇದರಿಂದ ಅನಾಹುತ ವಾಗುತ್ತದೆಂದು ಹೇಳಿ ಸಬ್-ಕಮಿಟಿಗೆ ಹಾಕಿ ಎಂದು ಹೇಳಿದ್ದು ರೆಕಾರ್ಡ್‌ನಲ್ಲಿದೆ. ಆದ್ದರಿಂದ ಅದಕ್ಕೆ ಜೀವದಾನ ಕೊಡಲಿಲ್ಲ. ಎರಡು ಮೂರು ತಿಂಗಳಲ್ಲೇ ಆ ವಿಷಯ ಮುಗಿದುಹೋಯಿತು. ಆದರೆ ಆಗ ಆದಂಥ ಅನಾಹುತಕ್ಕೆಲ್ಲಾ ಇವರೇ ಕಾರಣರು ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನಾನು ಹಾಗೆ ಹೇಳಲೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಕೊನೇವರೆಗೂ ಇದೇ ರೀತಿ ಇರಬೇಕೆಂದು ಕಾನೂನು ಮಾಡುವ ಉದ್ದೇಶ ನನಗಿರಲಿಲ್ಲ. ಯಾರು ಯಾರು ರೆವಿನ್ಯೂ ನಿವೇಶನದಲ್ಲಿ ಮನೆ ಕಟ್ಟಿಕೊಂಡಿದ್ದಾರೋ ಅಂಥ ವರಿಗೆ ಏನು ಮಾಡಬೇಕಿತ್ತು ? ನಾನು ಕಾನೂನು ಮಾಡಲಿಲ್ಲ ಎಂದು ಇಟ್ಟುಕೊಳ್ಳೋಣ. ಆಗ ಮನೆ ಗಳನ್ನು ಒಡೆಸಬೇಕಾಗಿತ್ತು. ಅದನ್ನು ತಪ್ಪಿಸುವ ಉದ್ದೇಶದಿಂದ ಈ ಕಾನೂನು ತರಬೇಕೆಂದು ಯೋಚನೆ ಮಾಡಿದ್ದೆ. ಸಾಲಸೋಲ ಮಾಡಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಹಣ ತೆಗೆದುಕೊಂಡವನು ಹಣ ತಿಂದುಕೊಂಡು ಹೋಗಿರುತ್ತಾನೆ. ಅವನಿಗೆ ಹಣ ವಾಪಸ್ ಕೊಡಿಸುವುದಕ್ಕಾಗುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಏನು ಮಾಡುತ್ತೀರಿ ? 15 ಕೋಟಿ ರೂಪಾಯಿಗಳನ್ನು ಜನತಾ ಮನೆಗಳಿಗೆ ಇಟ್ಟಿದ್ದೀರಿ. ಈ ಹಣದಲ್ಲಿ ಒಂದು ತಾಲ್ಲೂಕಿನಲ್ಲಿ 150 ಮನೆಗಳು ಬಂದರೆ ನಮ್ಮ ಪುಣ್ಯ. ಅಷ್ಟೂ ಕೂಡ ಈ ಹಣದಲ್ಲಿ ಬರುವುದಿಲ್ಲ. ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ 600-800 ಮನೆಗಳು ಒಂದೊಂದು ತಾಲ್ಲೂಕಿನಲ್ಲಿ ಬಂದಿತ್ತು. ಜನತಾ ಮನೆಗಳ ಬಗ್ಗೆ ಜಾಸ್ತಿ ಗಮನ ಕೊಡದೇಹೋದರೆ ದುರ್ಬಲವರ್ಗ ದವರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ.

Therefore, Mr. Speaker Sir, with all the good intention, I really brought in that Ordinance conferring rights on the owner who is already put up the construction on a particular revenue piece of land which he has purchased.

ಶ್ರೀ ಎಂ. ಚಂದ್ರಶೇಖರ್.—ಈ ರೀತಿ ಆಗಲೇ ಇಲ್ಲ. ಅನೇಕ ನಿವೇಶನಗಳನ್ನು ಹಂಚಿಬಿಟ್ಟು....

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಆಗಲೇ ಇಲ್ಲ ಎಂದು ಹೇಳಿದರೆ, ಅಂಕಿಅಂಶಗಳನ್ನು ಕೊಡಿ. ಅದನ್ನು ಬಿಟ್ಟು ಸುಮ್ಮನೆ ಅನಾಹುತ ಆಯಿತು. ಅನಾಹುತ ಆಯಿತು ಎಂದರೆ ಹೇಗೆ ನನಗೆ ಈ ಅಂಕಿ

ಅಂಶಗಳು ಗೊತ್ತಿದೆ. ಇದನ್ನು ತಂದಮೇಲೂ ಸಹ ಜನಗಳು ಎಷ್ಟು ದಡ್ಡರು ಎಂದರೆ ಇದರ ಉಪಯೋಗ ಅವರು ಮಾಡಿಕೊಳ್ಳಲೇ ಇಲ್ಲ. ಕನ್‌ವರ್ಷನ್ ಪ್ರೊಸೀಜರ್ ಸುಲಭ ಮಾಡಿದ್ದೇವೆ ಎಂದು ನಾನು ಪತ್ರಿಕೆಗಳ ಮೂಲಕ, ರೇಡಿಯೋ ಮೂಲಕ ಇಲಾಖೆಯ ಮೂಲಕ ಪ್ರಚಾರ ಮಾಡಿಸಿದೆ. ಕಾರಣ ಇದು ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಅನ್ವಯಿಸುತ್ತಿರಲಿಲ್ಲ. ಇದರಲ್ಲಿ ಚಿಕ್ಕ ಮಗಳೂರು ಮಂಗಳೂರು ಗುಲಬರ್ಗಾ, ಬೆಂಗಳೂರು ಎಲ್ಲ ಬರುತ್ತದೆ. ಹಳ್ಳಿಯಲ್ಲೂ ಸಹ ಈ ಕನ್‌ವರ್ಷನ್ ವಿಚಾರ ಇನ್‌ವಾಲ್ವ್ ಆಗಿದೆ ಎಂದು ಅಭಿಪ್ರಾಯ ಬರುತ್ತದೆ, ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥ ಸದಸ್ಯರಿಗೆ ಇದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಈ ಕಾನೂನು ಏತಕ್ಕೆ ಬಂದಿತು ಎಂದು ಅವರಿಗೆ ಅರ್ಥವಾಗುತ್ತದೆ. ಇದು ಜನರಿಗೆ ಗೊತ್ತಾಗುವ ಹೊತ್ತಿಗೆ ಮೂರು ತಿಂಗಳಾಯಿತು. ಎಲ್ಲೋ ಎರಡು ಮೂರು ಕೇಸ್‌ನಲ್ಲಿ ಮಾತ್ರ ಕನ್‌ವರ್ಷನ್ ಮಾಡಿಕೊಂಡರು. ಅನಾಹುತ ಆಗಿದ್ದರೆ ಅದಕ್ಕೇ ಮೊದಲೇ ಆಗಿಹೋಗಿತ್ತು, ರೆವಿನ್ಯೂ ಜಾಗ ಮಾರಾಟ ಮಾಡಿದ್ದು ಅದನ್ನು ತೆಗೆದುಕೊಂಡಿದ್ದು, ಎಲ್ಲಾ ಮೊದಲೇ ಆಗಿತ್ತು. ಈ ಆರ್ಡಿನೆನ್ಸ್ ಬಂದ ಮೇಲೆ ಆಗಲಿಲ್ಲ. ಆಗ ಶ್ರೀಮಾನ್ ದೇವರಾಜ ಅರಸು ಅವರು ವಿರೋಧಪಕ್ಷದ ನಾಯಕರಾಗಿದ್ದರು. ನಾನು ರೆವಿನ್ಯೂ ಮಿನಿಸ್ಟರ್ ಆಗಿದ್ದೆ. ಆಗ ಅವರು ಇದನ್ನು ಹೀಗೆ ಮುಂದುವರಿಸಿಕೊಂಡು ಹೋದರೆ ಇದು ಅನ್-ಮ್ಯಾನೇಜಬಲ್ ಆಗುತ್ತದೆ. ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶ ಆಗಬಹುದು ಎಂದು ಹೇಳಿದಾಗ ಅದರ ಬಗ್ಗೆ ಒಂದು ಕಮಿಟಿ ಮಾಡಲಾಯಿತು. ತಕ್ಷಣ ಬಡವರಿಗೆ ಉಪಯೋಗ ಆಗಲಿ ಎಂದು, ನಾನು ಈ ಕಾನೂನನ್ನು ವೇಗವಾಗಿ ತಂದಿದ್ದು ನಿಜ. ಬೇಗ ಕ್ಯಾಬಿನೆಟ್ ಅಪ್ರೂವ್ ಮಾಡಿಸಿಕೊಂಡು ತಂದಿದ್ದು ನಿಜ. ಈ ಕಾನೂನನ್ನು ಏತಕ್ಕೆ ಮಾಡಿದ್ದು ಎಂದರೆ ಬೇರೆ ರೀತಿ ಆದರೆ ಬಡವರಿಗೆ ಸೈಟ್ ಕೊಡುವುದಕ್ಕೆ ಆಗುವುದಿಲ್ಲ ಎಂಬ ಸದುದ್ದೇಶದಿಂದ ಮಾಡಿದೆ. ಇದರಿಂದ ಬಹಳ ದೊಡ್ಡ ಅನಾಹುತ ಆಗಿ ಹೋಯಿತು ಎಂದರೆ, ಅಂಕಿ ಅಂಶಗಳನ್ನು ತರಿಸಿ ಈ ಸದನದ ಮುಂದೆ ಇಡಿ. ನಾನು ಮಿನಿಸ್ಟರ್ ಆಗಿರುವವರೆಗೆ ಈ ರೀತಿ ಆಗಲು ಅವಕಾಶ ಕೊಟ್ಟಿಲ್ಲ. ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಟ್ರಿಕ್ಟ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೆ. ಇದರ ಬಗ್ಗೆ ವಾಚ್ ಮಾಡುತ್ತಿರಿ, ವಾಚ್ ಮಾಡಿ ನನಗೆ ತಿಳಿಸಿ ಎಂದು ಹೇಳಿದ್ದೆ. ಈ ಆಕ್ಟಿನ ಉಪಯೋಗ ಮಾಡಿಕೊಳ್ಳುವುದಕ್ಕೆ ಬಡವರಿಗೆ ಕಾಲಾವಕಾಶ ಸಿಗಲಿಲ್ಲ. ಇದನ್ನು ಅವರು ಅರ್ಥ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ ಎಂದು ಗಮನಕ್ಕೆ ಬಂತು. ಈ ಕನ್‌ವರ್ಷನ್ ಕಾನೂನನ್ನು ಒಂದು ಸದುದ್ದೇಶದಿಂದ ತಂದಿದ್ದೆ. ಯಾರು ರೆವಿನ್ಯೂ ಜಾಗದಲ್ಲಿ ಸೈಟ್ ತೆಗೆದುಕೊಂಡಿದ್ದರು. ಆ ಸೈಟ್ ರೆವಿನ್ಯೂ ಜಾಗವಾದುದರಿಂದ, ಅದು ಕನ್‌ವರ್ಷನ್ ಆಗಲಿ ಅವರಿಗೆ ಬೇರೆ ಕಡೆ ಸೈಟ್ ಕೊಟ್ಟರೆ, ಅವರಿಗೆ ಕಟ್ಟಿಸುವಷ್ಟು ಶಕ್ತಿ ಇಲ್ಲ ಎಂಬ ಮಾತನ್ನು ನಾನು ಹೇಳಿದ್ದೆ. ಅದನ್ನು ಬಿಟ್ಟು ಯಾರು ತಮ್ಮ ಸೈಟ್ ಬೌಂಡರಿ ಲೈನ್ ಮುಂದಕ್ಕೆ ಹಾಕುತ್ತಿದ್ದಾರೆ. ಶಕ್ತಿವಂತರಾದ ಜನ ಹಣಕಾಸಿನ ಶಕ್ತಿ ಇರತಕ್ಕಂಥ ಜನ, ಬಡವರಿಂದ ಈ ಸೈಟ್ ತೆಗೆದುಕೊಂಡು, ತಮ್ಮ ಬೌಂಡರಿ ಲೈನನ್ನು ಮುಂದಕ್ಕೆ ಹಾಕಿಕೊಂಡು ಸೆಂಟರ್‌ನಲ್ಲಿ ರಸ್ತೆಯ ಮಧ್ಯೆ ಕುಳಿತುಕೊಳ್ಳುತ್ತಿದ್ದಾರೆ ಅಂತಹವರಿಗೆ ಅನುಕೂಲ ಮಾಡುವುದಕ್ಕೆ ಇಲ್ಲ. ಯಾರು ಬಡವರಾಗಿರತಕ್ಕವರು, ಹಮಾಲಿ ಮಾಡತಕ್ಕವರು, ಕೂಲಿ ಮಾಡತಕ್ಕವರು, ಕಾರ್ಮಿಕರು ಇದ್ದಾರೆ ಅವರಿಗೆ ಈ ರೀತಿ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಾವು ಕಂಡಿದ್ದೇವೆ. ಈ ರೀತಿ ಊರು ಬೆಳೆದ ಹಾಗೆ ಬೌಂಡರಿ ಲೈನ್ ವಿಸ್ತಾರ ಮಾಡತಕ್ಕ ಜನರನ್ನು ನಾವು ಬನಶಂಕರಿ ಪ್ರದೇಶದಲ್ಲಿ ರಾಜಾಜಿನಗರದಲ್ಲಿ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜ್ ಹತ್ತಿರ, ಬಾಣಸವಾಡಿ ಪ್ರದೇಶದಲ್ಲಿ ಕಾಣಬಹುದು, ಇದು ನಿಮ್ಮ ಕಾಲದಲ್ಲಿ ಆಗಿದೆ ಎಂದು ಹೇಳಿದರೆ ಅದು ಸರಿಯಲ್ಲ. ಇದು ಅನೇಕ ವರ್ಷಗಳಿಂದ ಆಗಿರತಕ್ಕ ವಿಚಾರ. ಮತ್ತೊಂದು ವಿಚಾರ ಬಹಳ ಸೂಕ್ಷ್ಮವಾಗಿ ಈ ಸಂದರ್ಭದಲ್ಲಿ ಹೇಳುವುದು ಎಂದರೆ, ಭಿನ್ನ ಮಂಗಲ ಸ್ಲವರ್, ಫಸ್ಟ್ ಸ್ಟೇಜ್, ಲೇ ಔಟ್‌ನಲ್ಲಿ 12 ಫ್ಯಾಮಿಲಿಗಳು ಇವೆ, ಮಾನ್ಯ ಚಂದ್ರಶೇಖರ್ ರವರು ಇದನ್ನು ನೋಟ್ ಮಾಡಿಕೊಳ್ಳಬೇಕು. ಈ ವಿಚಾರ ಚರ್ಚೆಗೆ ಬರುತ್ತದೆ ಎಂದು ತಿಳಿದು, ನಿನ್ನೆ ದಿವಸ ನನಗೆ ವಿವರಗಳನ್ನು ತಂದುಕೊಟ್ಟರು. ಅಲ್ಲಿ ಹರಿಜನ ಗಿರಿಜನರು ಇರತಕ್ಕಂಥ ಜಾಗದಲ್ಲಿ 12 ಸಂಸಾರಗಳು ಸುಮಾರು 80 ವರ್ಷಗಳಿಂದ ಅಲ್ಲಿ ಜೀವನ ಮಾಡುತ್ತಿದ್ದಾರೆ. ಅದನ್ನು ರೆಕಾರ್ಡ್ಸ್ ಹೇಳುತ್ತಿವೆ. ಈಗ ಅವರು ಅಲ್ಲಿಂದ ಖಾಲಿ ಮಾಡಬೇಕೆಂದು ತಾವು ನೋಟೀಸ್ ಕೊಟ್ಟಿದ್ದೀರಿ. ಇದನ್ನು ಕನ್‌ವರ್ಷನ್ ಮಾಡದೇ ಹೋದರೆ ಇದಕ್ಕೆ ಒಂದು ಅಂತ್ಯ ಎನ್ನುವುದೇ ಇಲ್ಲ. ನೀವು ಅದನ್ನು ತೆಗೆದುಕೊಂಡು ದೊಡ್ಡವರಿಗೆ ಹಂಚುತ್ತೀರಿ. ಕಾರಣ ಅದು ಬಹಳ ಬೆಲೆ ಬಾಳತಕ್ಕ ಜಾಗವಾಗಿದೆ. ಇದನ್ನು ಅಲ್ಲಿ ವಾಸಮಾಡತಕ್ಕ ಹರಿಜನರಿಗೇ ಕೊಡಬೇಕೆಂದು ನಾನು ಹೇಳುತ್ತೇನೆ. ಅವರಿಗೆ ಅಲ್ಲೇ ಮನೆಕಟ್ಟಿಕೊಳ್ಳುವುದಕ್ಕೆ ಸೌಲಭ್ಯಗಳು, ಸಾಲಸೋಲ ಏನು ಕೊಡಿಸಬೇಕೋ ಅದನ್ನು ಕೊಡಿಸುವ ಕೆಲಸ ಮಾಡಿ. ಅದನ್ನು ದುಡ್ಡಿದ್ದವರಿಗೆ ಕೊಡುವ ಕೆಲಸ ಮಾಡಬೇಡಿ. ಇವರಿಗೇ ನೀವು ನೆರವು ಕೊಟ್ಟರೆ ಅವರು ಮನೆ ಕಟ್ಟಿಕೊಂಡು ಇರುತ್ತಾರೆ. ಆದರೆ ಅದನ್ನು ನೋಡತಕ್ಕಂಥ ಹೃದಯ ಶ್ರೀಮಂತಿಕೆ ಆಡಳಿತದಲ್ಲಿರುವವರಿಗೆ ಇರಬೇಕಾಗುತ್ತದೆ. ಬೆನ್ನಮಂಗಲ ಲೇಔಟ್‌ನಲ್ಲಿ ಜಾಗ ಖಾಲಿ ಮಾಡಿಕೊಂಡು 12 ಜನಕ್ಕೆ ಏನು ನೋಟೀಸ್ ಕೊಟ್ಟಿದ್ದೀರಿ. ಅದು ಸರಿಯಲ್ಲ, ಅವರಿಗೆ 3-7-81 ರಂದು ಮೊದಲು ನೋಟೀಸ್

ಕೊಟ್ಟಿದ್ದರು. ಇದುವರೆಗೆ ಏನೂ ಆಕ್ಷನ್ ತೆಗೆದುಕೊಂಡಿರಲಿಲ್ಲ, ಮತ್ತೆ ಈಗ ನೀವು ನೋಟೀಸ್ ಕೊಟ್ಟಿದ್ದೀರಿ. ಆಫೀಸರ್ಸ್ ಎಲ್ಲಾ ಹೋಗಿ ಅವರಿಗೆ ಟೈಂ ಫಿಕ್ಸ್ ಮಾಡಿದ್ದಾರೆ, ಯಾರೋ ಹೇಳಿದರು ಎಂದು ತಾವು ಅವರಿಗೆ ಭಿನ್ನಮಂಗಲ ಟ್ಯಾಂಕ್ ಒಳಗೆ ಸೈಟ್ ಕೊಟ್ಟಿದ್ದೀರಿ. ಆದರೆ ಅವರು ಇಲ್ಲಿ ನಮಗೆ ಮನೆ ಕಟ್ಟಿಸಿಕೊಡಿ ನಾವು ಹೋಗುತ್ತೇವೆ ಎಂದು ಹೇಳಿದ್ದಾರೆ, ಆದರೆ ಅವರಿಗೆ ಅಲ್ಟರ್‌ನೇಟೀವ್ ಆಗಿ ಏನೂ ಒದಗಿಸದೆ ಅವರನ್ನು ಖಾಲಿ ಮಾಡಿ ಎಂದರೆ ಹೇಗೆ ? ಈ ಮನೆ ಕಟ್ಟಿಸಿಕೊಡುವುದು ಇದೆ ಯಲ್ಲ ಇದು ಮಾನವೀಯತೆಯಿಂದ ನೋಡಬೇಕಾದಂಥ ಕಾರ್ಯಕ್ರಮ. ಮನೆ ಕೆಡುವುದು ಮಾನವೀ ಯತೆಯನ್ನು ಮೀರುವಂತಹ ಕಾರ್ಯಕ್ರಮ.

ಶ್ರೀ ಎಂ. ಚಂದ್ರಶೇಖರ್.—ಇದು ಈ ಮನೆಯಲ್ಲಿ ಪ್ರಸ್ತಾಪ ಆಗಿದೆ. ನಾನು ಇಷ್ಟು ಮಾತ್ರ ಆಶ್ವಾಸನೆ ಕೊಡುತ್ತೇನೆ. ರಸ್ತೆಯ ಮಧ್ಯದಲ್ಲಿ ಬರುವುದನ್ನು ಬಿಟ್ಟು ಬೇರೆ ಯಾವುದನ್ನೂ ಕೆಡುವುದಿಲ್ಲ, ಇವರಿಗೂ ಸಹ ಆಲ್ಟರ್‌ನೇಟಿವ್ ಆಗಿ ಪ್ರೊವಾಯ್ಡ್ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಈ ಪ್ರದೇಶದಲ್ಲಿ ಇದುವರೆಗೂ ಯಾವುದೇ ಮನೆಯನ್ನು ಕೆಡುವಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ವಾಸ್ತವಾಂಶಕ್ಕೆ ದೂರವಾದುದನ್ನು ಹೇಳಿದ್ದೀರಿ. ಚಿಕ್ಕ ಮಾರನಹಳ್ಳಿಯಲ್ಲಿ ಬುಲ್ಡೋಜರ್ ಹೊಡೆಸಿದರಲ್ಲ. ಅದು ಯಾರು ಮಾಡಿದ್ದು ?

ಶ್ರೀ ಎಂ. ಚಂದ್ರಶೇಖರ್.—ಇದರ ಬಗ್ಗೆ ಚರ್ಚೆ ಆಗಿದೆ.

ಶ್ರೀ ಎಂ, ವೀರಪ್ಪ ಮೊಯಿಲಿ.—ನಾವೂ ಕೂಡ ಆ ಜಾಗಕ್ಕೆ ಹೋಗಿ ನೋಡಿದ್ದೇವೆ. ಅವರಿಗೆ ಇದರ ಬಗ್ಗೆ ಹೆಚ್ಚು ವಿಷಯಗಳು ಗೊತ್ತಿದೆ. ಅವರು ಹೇಳುತ್ತಿದ್ದಾರೆ. ಆ ಕಡೆಯಿಂದಲೂ ರಸ್ತೆ ಬಂದಿದೆ ಈ ಕಡೆಯಿಂದಲೂ ರಸ್ತೆ ಬಂದಿದೆ. ಮಧ್ಯೆ ಮನೆ ಇದೆ. ಆ ಮನೆಯವರು ಏನು ಮಾಡಬೇಕು, ಒಂದು ಅವರು ಒಡೆಯಬೇಕು, ಇಲ್ಲ ಎಂದರೆ ನೀವು ಒಡೆಸುತ್ತೀರಿ, ಡಿಮಾಲಿಷನ್ ಈಸ್ ಇನ್‌ಎವಿಟೆಬಲ್, ರಸ್ತೆಯನ್ನು ಮಾಡಿಬಿಟ್ಟು ಅದರ ಮಧ್ಯದಲ್ಲಿ ಬಂದಿರುವುದನ್ನು ಒಡೆಯುವುದಿಲ್ಲ ಎಂದರೆ ಏನು ಅರ್ಥ ?

ಶ್ರೀ ಎಂ. ಚಂದ್ರಶೇಖರ್.—ರಸ್ತೆ ಮಧ್ಯೆ ಬಂದಿರುವುದನ್ನು ಡಿಮೊಲಿಷನ್ ಮಾಡಬೇಕಾಗುತ್ತದೆ. ಇದು ಮಾನ್ಯ ದೇವರಾಜ ಅರಸುರವರು ಇದ್ದಾಗಲೂ ಕೂಡಾ ಪ್ರಸ್ತಾಪ ಆಗಿತ್ತು. ಆಗ ಬಿ.ಟಿ.ಎಂ. ಸ್ಕೀಂನಲ್ಲೂ ಯಾವ ಯಾವುದು ರಸ್ತೆಯ ಮಧ್ಯೆ ಬರುತ್ತದೆ. ಅದನ್ನು ಡಿಮೊಲಿಷನ್ ಮಾಡಬೇಕೆಂದು ಒಪ್ಪಂದ ಆಯಿತು, ಅವುಗಳನ್ನು ತೆಗೆದು ಅವರಿಗೆ ಆಲ್ಟರ್‌ನೇಟಿವ್ ಸೈಟ್ ಪ್ರೊವಾಯ್ಡ್ ಮಾಡ ಬೇಕೆಂದು ತೀರ್ಮಾನ ಆಯಿತು.

ಶ್ರೀ ವೈ. ರಾಮಕೃಷ್ಣ.—ತಮ್ಮ ಸ್ಕೀಂ ಪ್ರಕಾರ, ರಸ್ತೆಯಲ್ಲಿ ಸಿಕ್ಕಿರುವ ಮನೆಗಳಿಗೆ ರಸ್ತೆಯ ಪಕ್ಕ ದಲ್ಲೇ ಸಣ್ಣ ಸಣ್ಣ ಸೈಟ್ ಕೊಟ್ಟು ಅಲ್ಲಿರತಕ್ಕ ಗುಡಿಸಲುಗಳನ್ನು ಕಿತ್ತುಹಾಕಿ ಎಂದು ನೋಟೀಸ್ ಕೊಡಿ ಸೈಟ್ ಕೊಡದೆ ಬುಲ್ಡೋಜರ್ ತೆಗೆದುಕೊಂಡು ಹೋಗಿ ಕಿತ್ತುಹಾಕಿದರೆ ಹೇಗೆ ಆಗುತ್ತದೆ. ? ಇದರ ಬಗ್ಗೆ ನೀವು ಕುಳಿತುಕೊಂಡು ಪರಿಶೀಲನೆ ಮಾಡಿ. ಗುಡಿಸಲುಗಳಲ್ಲಿ ವಾಸ ಮಾಡತಕ್ಕವರ ಯೋಗಕ್ಷೇಮ ಪ್ರಮುಖವಾದುದು. ತಾವು ಮನೆ ಕೆಡುವುದಕ್ಕಿಂತ ಮಂಚೆ, ಯಾವಾಗ ಲೇಔಟ್ ಮಾಡುತ್ತೀರಿ, ಅವರಿಗೆ ಲೇಔಟ್‌ನಲ್ಲಿ ಮೊದಲು ಅವರಿಗೆ ಸೈಟ್ ಕೊಡಿ. ಇಲ್ಲದೇ ಹೋದರೆ, ತಾವೇ ಹಣ ಕೊಟ್ಟು ಮನೆ ಕಟ್ಟಿಸಿ ಕೊಟ್ಟು ಆಮೇಲೆ ತಮ್ಮ ಪ್ಲಾನ್ ಪ್ರಕಾರ ಮನೆ ಒಡೆಸತಕ್ಕದ್ದನ್ನು ಮಾಡಿ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಈ ಬಿನ್ನಮಂಗಲ ಸ್ಟೇಜ್ ಇಂದಿರಾ ನಗರದ ಹತ್ತಿರ ಬರುತ್ತದೆ. ಬಿನ್ನಮಂಗಲ ಲೇಔಟ್‌ನಲ್ಲಿ ಮನೆಗಳನ್ನು ಕೆಡವಲಿಕ್ಕೆ ಸಿದ್ಧತೆ ನಡೆಸಿದ್ದಾರೆಂದು ಜನರು ನನ್ನ ಹತ್ತಿರ ಓಡಿಬಂದಿದ್ದರು.

ಶ್ರೀ ಎಂ. ಚಂದ್ರಶೇಖರ್.—ಅದರ ಬಗ್ಗೆ ನಾನು ನೋಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ಮನೆ ಕೆಡವತಕ್ಕದ್ದು ನಿಲ್ಲಿಸಿ ಅವರಿಗೆ ಖಾಯಂ ಮಾಡಬೇಕು.

4-30 p.m.

ಶ್ರೀ ಎಂ. ಚಂದ್ರಶೇಖರ್.—ಮನೆ ಕೆಡವಲಿಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಅವಶ್ಯಕತೆ ಇದ್ದು ಅಲ್ಲಿ ರಸ್ತೆ ಹೋಗುವಂತಾದ್ದು ಇದ್ದರೆ ವ್ಯವಸ್ಥೆ ಮಾಡಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ತರಕಾರಿ ಮಾರುವವರು, ಗಾರೆ ಕೆಲಸ ಮಾಡುವವರು ಇದ್ದಾರೆ ಸೈಟುಗಳನ್ನು ಕೊಟ್ಟು ತಕ್ಷಣ ಆಗುವುದಿಲ್ಲ. ಮನೆ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಈಗ ಬಿನ್ನಿ ಮಂಗಲದ ವಿಚಾರ ಹೇಳುತ್ತಿದ್ದೇನೆ. ಅಲ್ಲಿ 12 ಸಂಸಾರಗಳು ಇವೆ. ಆ ಲೇಔಟ್‌ನಲ್ಲಿ ಬರತಕ್ಕ ಸ್ಲಮ್ ಮನೆಗಳನ್ನು ಕೆಡಿವಿಸುವುದನ್ನು ನಿಲ್ಲಿಸುತ್ತೇವೆಂದು ಹೇಳಿದ್ದೀರಿ. ಸರಿತಾನೇ ?

ಶ್ರೀ ಎಂ. ಚಂದ್ರಶೇಖರ್.—12 ಕುಟುಂಬಗಳ ವಿಚಾರದ ಬಗ್ಗೆ ವಿಚಾರ ಮಾಡುತ್ತೇನೆ. ಮನೆಗಳನ್ನು ಕೆಡವಲಿಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಸಂದರ್ಭ ಇದ್ದರೆ ಅಲ್ಲಿ ನಾಲ್ಕೈದು ಮನೆಗಳು ಇದ್ದರೆ ಇದನ್ನು ಅಲ್ಲಿಗೆ ನಿಲ್ಲಿಸಿ ಕನೆಕ್ಷನ್ ಕೊಡದೇ ಇದ್ದರೆ ಆಗುತ್ತದೆಯೇ ?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಬಂಗಾರಪ್ಪನವರು ಹೇಳುವುದು ಇಷ್ಟೆ, ಅವರು ರಸ್ತೆ ಮಾಡುವುದನ್ನು ನಿಲ್ಲಿಸಿ ಎಂದು ಹೇಳುವುದಿಲ್ಲ, ರಸ್ತೆ ಕೆಲಸ ತೆಗೆದುಕೊಂಡು ಹೋಗುವುದಕ್ಕೆ ಮುಂದೆ ಇಂತಹವರ ಮನೆ ರಸ್ತೆಗೆ ಸಿಕ್ಕುತ್ತದೆ ಎಂದು ಗೊತ್ತಾಗುತ್ತದೆ. ಅವರಿಗೆ ಮೊದಲು ಸೌಕರ್ಯ ಮಾಡಿಕೊಟ್ಟು ನಂತರ ರಸ್ತೆ ಮುಂದೆ ತೆಗೆದುಕೊಂಡು ಹೋಗುವ ಬಗ್ಗೆ ತಾವು ಈ ಸದನಕ್ಕೆ ಆಶ್ವಾಸನೆ ಕೊಟ್ಟಿಲ್ಲ, ಅದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಅನೇಕ ಸಾರಿ ಈ ಮನೆಯಲ್ಲಿ ಮತ್ತು ಆ ಮನೆಯಲ್ಲಿ ಚರ್ಚೆಯಾಗಿ ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದೇನೆ. ಕಟ್ಟಡ ಕೆಡವಲಿಕ್ಕೆ ಮೊದಲು ಬದಲಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಹೇಳಿದ್ದಾರೆ, ಅದನ್ನು ನಾನು ಪತ್ರಿಕೆಗಳಲ್ಲೂ ನೋಡಿದ್ದೇನೆ. ಆದರೆ ವಾಸ್ತವವಾಗಿ ಏನು ನಡೆದಿದೆ. ಬಿನ್ನಮಂಗಲ ಸ್ಲಮ್ ಏರಿಯಾದಲ್ಲಿ 50ಅಡಿ ರಸ್ತೆ ಬರುವುದಿಲ್ಲ, ಬಂದರೆ ಕೆಲವು ಬರಬಹುದು. ಈಗ ತಾವು ಮನೆಗಳನ್ನು ಕೆಡವಲಿಕ್ಕೆ ಮುಂಚೆ ಬದಲಿವ್ಯವಸ್ಥೆ ಮಾಡದೇ ಕೆಡವಲಿಕ್ಕೆ ಹೋಗುವುದಿಲ್ಲ, ಅದೇ ರೀತಿ ಆದೇಶವನ್ನು ಇಲಾಖೆಗೆ ತಿಳಿಸುತ್ತೀರಾ ಎಂದು ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಈ ಮಧ್ಯೆ ನೀವು ಅವರಿಗೆ ಪರ್ಯಾಯವಾಗಿ ಸೈಟು ಕೊಟ್ಟರೆ ಸಾಲದು, ಗಾರೆ ಕೆಲಸವನ್ನು ಮಾಡತಕ್ಕವರಿಗೆ, ತರಕಾರಿ ಹೊತ್ತು ಕೂಲಿ ಮಾಡತಕ್ಕವರಿಗೆ ಸೈಟುಗಳನ್ನು ಕೊಟ್ಟರೆ ಆಯಿತು ಎನ್ನುವ ಭಾವನೆ ಇರಬಾರದು. ಸೈಟು ಕೊಡುವ ಜೊತೆಗೆ ಮನೆ ಕಟ್ಟಿಸಿಕೊಡತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇಡೀ ಭಾಗಕ್ಕೆ ಸಾರ್ವಜನಿಕರ ಅನುಕೂಲ ದೃಷ್ಟಿಯಿಂದ ಮಾಡುವುದು ಇದ್ದರೆ ಮಾಡಿ ಯಾವ ಸರ್ಕಾರ ಬಂದರೂ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇಡೀ ಭಾಗದ ಜನತೆಗೆ ಅನುಕೂಲ ಆಗುವಂತೆ ಮಾಡುವುದು ಮಾಡಿ.

ಶ್ರೀ ಎಂ. ಚಂದ್ರಶೇಖರ್.—ಈಗ ಮನೆ ಕಟ್ಟಿರುತ್ತಾರೆ, ಆದರ ಸಾಮಾನುಗಳನ್ನು ನಿವೇಶನ ಕೊಡುವ ಕಡೆ ಉಪಯೋಗ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸಿಮೆಂಟ್ ಉಪಯೋಗ ಮಾಡಿರುತ್ತಾರೆ ಮತ್ತೆ ಅದರ ಉಪಯೋಗ ಪಡೆದುಕೊಳ್ಳಲಿಕ್ಕೆ ಆಗುತ್ತದೆಯೇ ?

ಶ್ರೀ ಎಂ. ಚಂದ್ರಶೇಖರ್.—ಉಪಯೋಗವಾಗುವಂಥ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಕಟ್ಟಬೇಕಾಗುತ್ತದೆ. ' ತಮಗೆ ಉದಾಹರಣೆ ಹೇಳಬೇಕೆಂದರೆ, ಶನಿವಾರ ಆಜಾಗ ಖಾಲಿ ಇದ್ದು ಸೋಮವಾರದ ಹೊತ್ತಿಗೆ ಸಾವಿರಾರು ಗುಡಿಸಲು ಕಟ್ಟಿಕೊಂಡಿರುವಂಥ ಜನರ ವಿಚಾರ ಇದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಆರ್‌ಸಿಸಿ ಬಿಲ್ಡಿಂಗ್ ಕಟ್ಟಿದ್ದರೆ ಆದರಿಂದ ಏನು ಸಿಕ್ಕುತ್ತದೆ. ಏನು ಸಾಮಾನುಗಳನ್ನು ತೆಗೆದುಕೊಂಡು ಹೋಗಬಹುದು. ಬಾಗಿಲು, ಕಿಟಕಿಗಳು ಸಿಕ್ಕಬಹುದು, ಸಿಮೆಂಟ್ ಮತ್ತು ಜೆಲ್ಲಿ ಉಪಯೋಗಕ್ಕೆ ಸಿಗುವುದಿಲ್ಲ. ಅದನ್ನು ಒಡಿಸಲಿಕ್ಕೆ ಹೋದರೆ ಖರ್ಚು ಅಷ್ಟೇ ಬರುತ್ತದೆ. ಹಳ್ಳಗಳನ್ನು ತುಂಬಲಿಕ್ಕೆ ಮಣ್ಣು ಸಿಕ್ಕುತ್ತದೆ ಅಷ್ಟೆ. ಆ ಮನೆಯವರಿಗೆ ಇದಕ್ಕಿಂತಲೂ ಹೆಚ್ಚು ಏನೂ ಸಿಕ್ಕುವುದಿಲ್ಲ. ಆದ್ದರಿಂದ, ಆ ನೀತಿಯನ್ನು ಮಾರ್ಪಡಿಸಬೇಕೆಂದು ನನ್ನ ಸಲಹೆ ಮತ್ತೆ ಬೇರೆ ಕಾನ್‌ಸಿಕ್ವೆನ್‌ಸಸ್‌ಗೆಲ್ಲಾ ಸಿದ್ಧ ಇರಬೇಕಾಗುತ್ತದೆ. ಬಾಣಸವಾಡಿ, ಚಿಕ್ಕೇರನಹಳ್ಳಿ ಭಾಗ ಏನಿದೆ ಈ ಭಾಗದ ಜನ ಸತ್ಯಾಗ್ರಹ ಮಾಡಿದರು ಹೆಣ್ಣುಮಕ್ಕಳ ಮೇಲೆ ಕೇಸ್ ಹಾಕಿ ಅಲೆಸುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ದಿನಗೂಲಿ 5-6 ರೂಪಾಯಿಗೆ ಕೆಲಸಕ್ಕೆ ಬಂದರೆ, ಗೂಂಡಾಗಳು ಹೋಗಿ ರಾತ್ರೋರಾತ್ರಿ ಕ್ಯಾಂಪ್‌ನಲ್ಲಿದ್ದ ಹೆಣ್ಣು ಮಕ್ಕಳ ಮೇಲೆ ಬಿದ್ದು ಊರು ಬಿಟ್ಟು ಹೋಗುವಂತೆ ಮಾಡಿದ್ದಾರೆ. ಅವರ ಮೇಲೆ ಕ್ರಮ ನಡೆದಿದೆ.

ಶ್ರೀ ಎಸ್. ಬಂಗಾರಪ್ಪ.—ಈಗ ನೀವು ನಿಜಾಂಶ ಮುಚ್ಚಿಡುತ್ತಿದ್ದೀರಿ, ನಿಮಗೆ ಸರಿಯಾಗಿ ವಿಚಾರ ಗೊತ್ತಿಲ್ಲ. ನೀವು ಸರಿಯಾಗಿ ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಕೆಲವೊಂದು ಕಾರಣ ಹೇಳುತ್ತೇನೆ. 18 ಜನ ಲೇಡೀಸ್ ಮೇಲೆ ಬಾಣಸವಾಡಿ ಭಾಗದಲ್ಲಿ ಕೇಸ್ ಹಾಕಿದ್ದಾರೆ. ಅವರು ಯಾವ ಗುಂಡಾಗಿರಿ ಮಾಡಿದ್ದರು.

ಶ್ರೀ ಎಂ. ಚಂದ್ರಶೇಖರ್.-ಪೋಲೀಸ್ ಕಾಯಿದೆ 144 ಸೆಕ್ಷನ್ ಇದ್ದಾಗ, ಗಲಾಟೆ ಮಾಡಿದ್ದಾರೆಂದು ಬಂಧಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಮಂತ್ರಿಗಳು ಏನು ಹೇಳುತ್ತಿದ್ದೀರಿ ಅದು ಸರಿಯಲ್ಲ. ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಾಗ 18 ಜನರು ಹೆಂಗಸರು ಮತ್ತಿತರರು ಅಲ್ಲಿ ಅಬ್‌ಸ್ಟ್ರಕ್ಟ್ ಮಾಡಿದರು ಎನ್ನುವ ಚಾರ್ಜ ಮೇಲೆ ಬಂಧಿಸಿರುವಂಥದ್ದು ಇದೆ.

ಶ್ರೀ ಜಿ. ಡಿ. ಸೋಮಪ್ಪ.—ಜನತಾ ಸರ್ಕಾರ ಬಂದಮೇಲೆ ಮಹಿಳೆಯರ ಮೇಲೆ ಕೇಸ್ ಹಾಕಲಿಕ್ಕೆ ಹೊಸದಾಗಿ ಶುರು ಮಾಡಿದ್ದೀರಿ. ಈಗ ತಾವು 20 ಪರ್‌ಸೆಂಟ್ ರಿಸರ್ವೇಷನ್ ಮಹಿಳೆಯರಿಗೆ ಕೊಟ್ಟಿರುವಾಗ ಇನ್ನು ಇಬ್ಬರು ಮಹಿಳೆಯರನ್ನು ಏತಕ್ಕೆ ಬಂಧಿಸಲಿಲ್ಲ ?

ಶ್ರೀ ಎಸ್. ಬಂಗಾರಪ್ಪ.—ಗೂಂಡಾಗಿರಿ ಮಾಡಿ ಅಫಿಯಲ್ ಮೆಷಿನರಿ ಮೇಲೆ ಬಿದ್ದರೆ ಕೇಸ್ ಹಾಕಿ ಲೇಡೀಸ್ ಅಷ್ಟೆ ಎಂದು ನೈಸ್ ಆಗಿ ಮಾತನಾಡಬಾರದು. ನೀವು ಮನೆಗೆ ಹೋಗಿ ನೋಡಿದ್ದೀರಾ ? ಜನರು ಬರಲಿ, ನೀವೂ ಬನ್ನಿ, ಯಾವರೀತಿ ಆಗಿದೆ ಹೋಗಿ ನೋಡೋಣ. ಅಲ್ಲಿ ಸ್ವಂತ ಮನೆ ಇರತಕ್ಕ ಹೆಂಗಸರು ಯಾರು ಇದ್ದಾರೆ ಅವರು ಸಹ ಇದರ ಬಗ್ಗೆ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಅವರು ಮಾನಮರ್ಯಾದೆ ಇರತಕ್ಕ ಹೆಣ್ಣುಮಕ್ಕಳು. ಅಂತಹವರ ಮೇಲೆ ಕೇಸ್ ಹಾಕಿದ್ದೀರಿ. ಗೂಂಡಾಗಳು ಎಂದು ಮಾತನಾಡಿದರೆ ಅದು ಸರಿಯಾದಂಥ ಮಾತು ಆಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಅದು ಬೇರೆ ಕೇಸ್ ಇರಬೇಕು.

ಶ್ರೀ ಬಾಪೂಗೌಡ.—ಲೇಡೀಸ್ ಗೂಂಡಾಗಳು ಇದ್ದಾರೆ ಎನ್ನುವ ಬಗ್ಗೆ ಚರ್ಚೆಯಾಗುತ್ತಿದೆ. ಲಂಬಾಣಿತಾಂಡಗಳು ಇವೆ, ಅಲ್ಲಿ ಭಟ್ಟಿ ಸಾರಾಯಿ ಮಾಡುತ್ತಾರೆ, ಅಲ್ಲಿಗೆ ಪೋಲೀಸ್ ಹೋದಾಗ ಹೆಣ್ಣುಮಕ್ಕಳು ಏನು ಮಾಡುತ್ತಾರೆ ಮಾನ್ಯ ಸದಸ್ಯರಿಗೆ ಗೊತ್ತಿದೆಯೇ ?

ಶ್ರೀ ಎಸ್. ಬಂಗಾರಪ್ಪ.— ಅದು ನಿಮ್ಮ ಶಹಾಪುರ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಕಂಡಿರಬಹುದು. ಬೇರೆ ಲಂಬಾಣಿ ತಾಂಡಗಳಲ್ಲಿ ಚೆನ್ನಾಗಿಯೇ ಇದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ನೇರವಾಗಿ ವಿಷಯಕ್ಕೆ ಬರುತ್ತಿದ್ದೇನೆ. ಈಗ ಕೇಸುಗಳನ್ನು ನೇರವಾಗಿ ಹಾಕಿದ್ದೀರಿ. ಕಾಚರಕನಹಳ್ಳಿ, ಸುಬ್ಬಯ್ಯನಪಾಳ್ಯ, ಬಾಣಸವಾಡಿ ಮುಂತಾದ ಕಡೆಗಳಲ್ಲಿ ನೀವು ಏನು ಮಾಡಿದ್ದೀರಿ ಎನ್ನುವ ಬಗ್ಗೆ ನನ್ನ ಹತ್ತಿರ ಸಂಪೂರ್ಣ ವಿವರ ಇದೆ. ಅಲ್ಲಿ ಸುಮಾರು 10–15 ಸಾವಿರ ಮನೆಗಳು ಇವೆ. ನಿಮ್ಮ ಬಜೆಟ್‌ನಲ್ಲಿ ಈ ಜನತಾ ಹೌಸಿಂಗ್ ಸ್ಕೀಂಗೋಸ್ಕರ ಕೇವಲ 15 ಕೋಟಿ ರೂ. ಗಳನ್ನು ಮಾತ್ರ ಇಟ್ಟಿದ್ದೀರಿ. ಇದನ್ನು ಲೆಕ್ಕ ಹಾಕಿದರೆ ಒಂದೊಂದು ತಾಲೂಕಿಗೆ 120 ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಬಹುದು. ನಾನಾದರೂ ಕೇಳುತ್ತೇನೆ, ನೀವು ಸುಮಾರು 25 ಸಾವಿರ ಮನೆಗಳನ್ನು ಇಲ್ಲಿ ಒಡೆಸುವುದಕ್ಕೆ ನಿಮಗೆ ಅಧಿಕಾರ ಎಲ್ಲಿದೇ ನಿಮ್ಮ ಬಿ. ಡಿ. ಎ. ಅಧಿಕಾರಿಗಳು ಅಂದರೆ ಛೇರ್ಮನ್, ಕಮಿಷನರ್‌ಗಳು ಆ ಸ್ಥಳಕ್ಕೆ ಹೋದಾಗ ಎಲ್ಲೆಲ್ಲಿ 60 ಅಡಿ ರಸ್ತೆ ಬರುತ್ತದೆ ಅಂಥಕಡೆ ಇರತಕ್ಕ ಮನೆಗಳನ್ನು ಮಾತ್ರ ಒಡೆಯಬೇಕೆಂದು ಅವರು ಹೇಳಲಿಲ್ಲ. ಇವರು ಅಲ್ಲಿ ಹೋಗಿ ಏನು ಮಾಡಿದರು ಎಂದರೆ, ಅಲ್ಲಿರತಕ್ಕ ಎಲ್ಲ ಮನೆಗಳನ್ನೂ ಒಂದು ಕಡೆಯಿಂದ ಒಡೆದುಹಾಕಿ ಎಂದು ಹೇಳಿದ್ದಾರೆ. ಆದರೆ ರಿಂಗ್ ರೋಡ್ ಅಥವಾ ಬೇರೆ ರಸ್ತೆಗಳು ಏನಿವೆ ಅವುಗಳಲ್ಲಿ ಬರತಕ್ಕಂಥ ಮನೆಗಳನ್ನು ನೀವು ಒಡೆದುಹಾಕಿದರೆ ಅದಕ್ಕೆ ನಾವು ಅಡ್ಡ ಬರುವುದಿಲ್ಲವೆಂದು ಅಲ್ಲಿನ ಜನರು ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ನಿಮ್ಮ ಬಿ.ಡಿ.ಎ, ಅಧಿಕಾರಿಗಳು ಪೋಲೀಸರನ್ನು ಕರೆದುಕೊಂಡುಹೋಗಿ ಪಹರೆ ಇಟ್ಟುಕೊಂಡು ಅಲ್ಲಿದ್ದ ಸುಮಾರು 25 ಸಾವಿರ ಮನೆಯವರಿಗೂ ಬೆದರಿಕೆಯನ್ನು ಹಾಕಿದ್ದಾರೆ. ನೀವು ನಿಮ್ಮ ಬಿ.ಡಿ.ಎ. ಛೇರ್ಮನ್‌ರವರಿಗೆ ಒಂದು ಎಚ್ಚರಿಕೆಯನ್ನು ಕೊಡಬೇಕು, ಅವರನ್ನು ನೀವು ಹಿಡಿತದಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು ....

ಶ್ರೀ ಎಂ. ಚಂದ್ರಶೇಖರ್.-ಈ ಪ್ರಕರಣ ಆಗಿರುವುದು 6-2-84 ರಲ್ಲಿ. ಇವತ್ತು 11-4-84 ಅಂದರೆ ಈಗಾಗಲೇ 2 ತಿಂಗಳು ಆಗಿಹೋಗಿದೆ, ಆದರೆ ನೀವು ಈಗ ಹೇಳುತ್ತಿರುವ ದಾಟಿಯನ್ನು

ನೋಡಿದರೆ ಈ ಪ್ರಕರಣ ಇವತ್ತು ನಡೆದಿದೆಯೋ, ಏನೋ, ಎನ್ನುವಂತೆ ಭಾಸವಾಗುತ್ತದೆ. ಆದರೆ ಆವತ್ತಿನ ಪರಿಸ್ಥಿತಿಗೂ ಇವತ್ತಿನ ಪರಿಸ್ಥಿಗೂ ಬಹಳ ವ್ಯತ್ಯಾಸ ಇದೆ. ಈ ಪ್ರಕರಣ ಆದಮೇಲೆ ಇವತ್ತಿನವರೆಗೂ ನಾವು ಒಂದೇ ಒಂದು ಗುಡಿಸಲನ್ನು ಎಲ್ಲಾದರೂ ಕೆಡವಿದ್ದರೆ ತೋರಿಸಿಕೊಡಿ. ನಮ್ಮ ಅಧಿಕಾರಿಗಳು ಯಾರಾದರೂ ಆರೀತಿ ಕೆಡವಿಸಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಅಲ್ಲಿ ಒಬ್ಬ ಲೇಡಿ ಕೆಲವು ಗೂಂಡಾಗಳನ್ನು ಇಟ್ಟುಕೊಂಡು ಚಾಕು, ಚೂರಿಯವರನ್ನು ಇಟ್ಟುಕೊಂಡಿದ್ದು ಅಲ್ಲಿನ ಕೆಲವರಿಗೆ ಹೊಡೆಸಿದ್ದಾಳೆ....

ಶ್ರೀ ಎಸ್. ಬಂಗಾರಪ್ಪ.—ಈ ಪ್ರಕರಣ ಇವತ್ತು ಆಗಿದೆ ಎಂದು ನಾನು ಹೇಳುತ್ತಿಲ್ಲ. ಈ ಪ್ರಕರಣ ಅವತ್ತು ಆದಮೇಲೆ ಸುಮಾರು 7–8 ದಿವಸಗಳು ಕಳೆದನಂತರ ನಾನೂ ಮತ್ತು ನನ್ನ ಸಹೋದ್ಯೋಗಿಗಳು ಆ ಸ್ಥಳಕ್ಕೆ ಕಾರಿನಲ್ಲಿ ಹೋಗಿ ಸುಮಾರು 2–3 ಗಂಟೆಗಳಕಾಲ ಅಲ್ಲೆಲ್ಲಾ ಸುತ್ತಾಡಿ ಆ ಜನರನ್ನು ಭೇಟಿ ಮಾಡಲು ಹೋದಾಗ ಸಾವಿರಾರು ಜನರು ಅಲ್ಲಿಗೆ ಬಂದು ತಮ್ಮ ಗೋಳನ್ನು ಹೇಳಿಕೊಂಡರು. ಅಲ್ಲಿ ಕೂಲಿ ಮಾಡುವವರೂ, ಹಿಂದುಳಿದವರ್ಗದವರೂ, ಅಲ್ಪಸಂಖ್ಯಾತರೂ, ಹರಿಜನರೂ, ಬಹಳವಾಗಿದ್ದಾರೆ. ಅವರೆಲ್ಲರೂ ಏನು ಹೇಳಿದರು ಎಂಬುದನ್ನು ನಾನು ಆಮೇಲೆ ಹೇಳುತ್ತೇನೆ. ತಾವು ಅಲ್ಲಿ ಪೊಲೀಸರನ್ನು ಇನ್ನೂ ಇಟ್ಟದ್ದೀರೋ ಅಥವಾ ಅವರನ್ನು ವಾಪಸು ಕರೆಸಿಕೊಂಡಿದ್ದೀರೋ ಎಂಬುದನ್ನು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ನನಗೆ ಯಾವುದೇ ರೀತಿಯ....

ಶ್ರೀ ಎಸ್. ಬಂಗಾರಪ್ಪ.—ನಾನು ತಮ್ಮನ್ನು ಕೇಳುತ್ತಿದ್ದೇನೆ, ಆ ಪ್ರದೇಶದಲ್ಲಿ ಪೊಲೀಸರನ್ನು ಇನ್ನೂ ಇಟ್ಟಿದ್ದೀರೋ ಅಥವಾ ಅವರನ್ನು ವಾಪಸು ಕರೆಸಿಕೊಂಡಿದ್ದೀರೊ ಎಂಬುದನ್ನು ನಿರ್ದಿಷ್ಟವಾಗಿ ನನಗೆ ಹೇಳಬೇಕು.

ಶ್ರೀ ಬಾವುಗೌಡ ದರ್ಶನಾಪುರ.—ಮಾನ್ಯ ಅಧ್ಯಕ್ಷರೆ, ಈಗ್ಗೆ 2 ತಿಂಗಳ ಹಿಂದೆ ಆದಂಥ ವಿಚಾರವನ್ನು ಮಾನ್ಯ ಸದಸ್ಯರಾದ ಬಂಗಾರಪ್ಪನವರು ಹೇಳುತ್ತಿದ್ದಾರೆ. ಅವರು ಹೇಳುವ ಧಾಟಿಯನ್ನು ನೋಡಿದರೆ ಆ ಘಟನೆ ಈಗ ನಡೆಯುತ್ತಿದೆಯೋ ಏನೋ ಎನ್ನುವ ಅರ್ಥ ಬರುವಂತಿದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಏತಕ್ಕೆ ಹೇಳುತ್ತಿದ್ದೇನೆಂಬುದು ತಮಗೆ ಈಗ ಅರ್ಥವಾಗುವುದಿಲ್ಲ ಸ್ವಾಮಿ, ಈ ಅಧಿವೇಶನ ನಾಳೆ ಮುಗಿಯುತ್ತಿದೆ. ಈಗ ಅಧಿವೇಶನ ನಡೆಯುತ್ತಿರುವುದರಿಂದ ನಿಮ್ಮ ಪೋಲಿಸರು ಮತ್ತು ಇಲಾಖೆಯ ಅಧಿಕಾರಿಗಳು ಸುಮ್ಮನಿದ್ದಾರೆ. ಈ ಅಧಿವೇಶನ ಮುಗಿದ ಕೂಡಲೆ ಮತ್ತೆ ಅವರು ತಮ್ಮ ಕಾರ್ಯಾಚರಣೆ ಪ್ರಾರಂಭಮಾಡುತ್ತಾರೆ, ಈ ಒಂದು ಶಂಕೆ ನಮ್ಮಲ್ಲೂ ಇದೆ, ಅಲ್ಲಿಯ ಜನರ ಮನಸ್ಸಿನಲ್ಲೂ ಇದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಈಗ ನಾನು ಮಧ್ಯೆ ಪ್ರವೇಶ ಮಾಡಿ ಮಾತನಾಡಬೇಕಾಗುತ್ತದೆ. ಮಾನ್ಯ ಬಂಗಾರಪ್ಪನವರು ಹೇಳಿದರು, ಈ ಅಧಿವೇಶನ ಮುಗಿದಮೇಲೆ ಮತ್ತೆ ಪೋಲೀಸರೂ, ಇಲಾಖೆಯವರೂ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭ ಮಾಡುತ್ತಾರೆ. ಅಧಿವೇಶನ ನಡೆಯುತ್ತಿರುವುದರಿಂದ ಅವರೆಲ್ಲರೂ ಸುಮ್ಮನಿದ್ದಾರೆ ಎಂದು ತಿಳಿಸಿದ್ದಾರೆ. ನಾನಾದರೂ ಅವರಿಗೆ ಹೇಳುತ್ತೇನೆ. ಈ ಪ್ರಕರಣ ಆದಾಗ ಅಂದರೆ ಫೆಬ್ರುವರಿ ತಿಂಗಳಲ್ಲೂ ಕೂಡ ಅಧಿವೇಶನ ನಡೆಯುತ್ತಿತ್ತು. ಆದರೆ ಅಧಿವೇಶನ ಇರಲಿ, ಇಲ್ಲದಿರಲಿ ನಾವು ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದ್ದೇವೆ. ಸುಮಾರು 5–6 ಸಾವಿರ ನಿವೇಶನಗಳನ್ನು ಅವರಿಗೆ ಕೊಡ ಬೇಕಾಗಿದೆ, ಆ ಜನರಿಗೆ ತೊಂದರೆ ಆಗಬಾರದು, ಆರೀತಿ ನೋಡಿಕೊಳ್ಳಬೇಕೆಂದು ನಾವು ನಮ್ಮ ಅಧಿಕಾರಿಗಳಿಗೆ ನಿರ್ದೇಶನವನು ಕೊಟ್ಟು ಅದರ ಪ್ರಕಾರ ಅವರಿಗೆ ಅನುಕೂಲವಾಗುವಂತೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—1971 ರಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸನ್ನು ಮಾಡಬೇಕೆಂದು ಸರ್ಕಾರದಿಂದ ಒಂದು ನೋಟಿಫಿಕೇಷನ್ ಹೊರಟಿತು. ರೆವಿನ್ಯೂ ಸೈಟುಗಳಲ್ಲಿ ಅನಧಿಕೃತವಾಗಿ ಮನೆಗಳು ಕಟ್ಟಲ್ಪಡುತ್ತಿದ್ದುವು. ರೆವಿನ್ಯೂ ಸೈಟುಗಳು ಮಾರಾಟವಾಗುತ್ತಿದ್ದುವು. ಆ ಸಂದರ್ಭದಲ್ಲಿ ಹಲವಾರು ಜನ ಬಡವರು, ಹರಿಜನರು, ಹಿಂದುಳಿದವರ್ಗದ ಜನರು ರೆವಿನ್ಯೂ ಜಾಗದಲ್ಲಿ ಅನಧಿಕೃತವಾಗಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡಿದ್ದರು. ಇವರು ನೋಟಿಫಿಕೇಷನ್ ಹೊರಡಿಸಿದ ನಂತರ ಅಲ್ಲಿನ ಜನರು ಬಂದು ನಾವೆಲ್ಲಾ ಸಣ್ಣ ಸಣ್ಣ ಮನೆಗಳನ್ನು ಕಟ್ಟಿ ಕೊಂಡಿದ್ದೇವೆ, ನಾವು ಬೇರೆಕಡೆ ಹೋಗುವುದಕ್ಕಾಗುವುದಿಲ್ಲ, ಆದ್ದರಿಂದ ಆ ಪ್ರದೇಶವನ್ನು ಡೀ-ನೋಟಿಫೈ ಮಾಡಬೇಕೆಂದು ಕೇಳಿಕೊಂಡರು. ಆಗ ಟ್ರಸ್ಟ್

ಬೋರ್ಡ್‌ನವರು ಆ ಇಡೀ ಪ್ರದೇಶವನ್ನು ಡಿ-ನೋಟಿಫೈ ಮಾಡುವುದಕ್ಕೆ ತೀರ್ಮಾನವನ್ನು ತೆಗೆದಕೊಂಡರು. ಅಷ್ಟರಲ್ಲಿ ಮತ್ತೆ ಸಾವಿರಾರು ಬಡಜನರು ಮನೆಗಳನ್ನು ಕಟ್ಟಿಕೊಂಡರು. 80ರಲ್ಲಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್‌ನ್ನು ಇನಿಷಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದಮೇಲೆ ಹಿಂದಿನ ಸರ್ಕಾರದವರೂ ಕೂಡ ಅಲ್ಲಿನ ಮನೆಗಳನ್ನು ತೆಗೆಯಬೇಕೆಂದು ಅವರಿಗೆ ನೋಟೀಸನ್ನು ಕೊಟ್ಟರು. ಆಗ ಆ ಜನರು ಮತ್ತೆ ಸರ್ಕಾರದಮೇಲೆ ಒತ್ತಡವನ್ನು ತಂದರು. ಆಗ ಆ ಮನೆಗಳನ್ನು ಒಡೆಯುವುದು ಬೇಡ ಅವು ಹಾಗೆಯೇ ಇರಲಿ ಎಂದು ಹಾಗೆಯೇ ಬಿಟ್ಟರು. ಈ ಪ್ರದೇಶ ಬೆಂಗಳೂರು ಉತ್ತರ ತಾಲೂಕಿಗೆ ಸೇರುತ್ತದೆ. ಈ ಪ್ರದೇಶಕ್ಕೆ ಸರ್ಕಾರದವರು ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಿಕೊಟ್ಟಿದ್ದಾರೆ, ವಿದ್ಯುಚ್ಛಕ್ತಿಯನ್ನು ಒದಗಿಸಿಕೊಟ್ಟಿದ್ದಾರೆ, ಬೀದಿ ದೀಪಗಳನ್ನು ಹಾಕಿಸಿಕೊಟ್ಟಿದ್ದಾರೆ, ಅಲ್ಲಿ ಒಂದು ಪ್ರೈಮರಿ ಸ್ಕೂಲು, 3 ಚರ್ಚ್‌ಗಳು, 2 ಹೈಸ್ಕೂಲುಗಳು, 12 ಹಿಂದೂ ದೇವಸ್ಥಾನಗಳೂ, 4 ಮುಸ್ಲಿಂ ಮಸೀದಿಗಳೂ ಇವೆ. ಆ ಟೌನ್‌ಷಿಪ್ ಬಹಳ ದೊಡ್ಡದಾಗಿ ಬೆಳೆದಿದೆ. ಅಲ್ಲಿ ಬಡವರು, ಹರಿಜನರು, ಅಲ್ಪಸಂಖ್ಯಾತರು, ಹಿಂದುಳಿದವರ್ಗದವರು ಬಹಳ ಜನ ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಆ ಜಾಗವನ್ನು ಮಿಲಿಟರಿಯವರಿಗೆ ಕೊಡಬೇಕೆಂಬ ದೃಷ್ಟಿಯಿಂದ ಒಬ್ಬ ಕ್ರಿಶ್ಚಿಯನ್ ಮಹಿಳೆಗೆ ಸೇರಿದಂಥ ಆರ್.ಸಿ.ಸಿ. ಟೆರೇಸ್ ಬಿಲ್ಡಿಂಗ್‌ನ ಮೇಲೆ ಸರ್ವೆಯನ್ನು ಮಾಡಿಸುತ್ತಿದ್ದರು. ಅದರಲ್ಲೂ ಪೋಲೀಸರನ್ನು ಇಟ್ಟುಕೊಂಡು ಅಲ್ಲಿ ಸರ್ವೆ ಕೆಲಸವನ್ನು ಮಾಡಿಸುತ್ತಿದ್ದರು. ಈಗಲೂ ಅಲ್ಲಿ ಪೋಲೀಸ್ ಪಹರೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ....

ಶ್ರೀ ಎಂ. ಚಂದ್ರಶೇಖರ್.—ಜನರ ರಕ್ಷಣೆಗೋಸ್ಕರ ಅಲ್ಲಿ ಪೋಲೀಸರನ್ನು ಹಾಕಲಾಗಿತ್ತು ಅಷ್ಟೆ. ಬೇರೆ ಉದ್ದೇಶಕ್ಕೆ ಅವರನ್ನು ಹಾಕಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸುಮಾರು ಒಂದೂ ಒಂದೂವರೆ ಲಕ್ಷ ಜನರು ಅಲ್ಲಿ ವಾಸಮಾಡುತ್ತಿದ್ದಾರೆ. ಇದು ಸಣ್ಣ ವಿಚಾರವೇನೂ ಅಲ್ಲ. ಕಳೆದ ಚುನಾವಣೆ ಸಂದರ್ಭದಲ್ಲಿ ಭಾರಿ ಭಾರಿ ಪ್ರಚಾರದ ಭಾಷಣಗಳೇ ನಡೆದವು. ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಯಾರಾದರೂ ಕಟ್ಟಿಕೊಂಡರೆ ಅದಕ್ಕೆ ಕಾಂಗ್ರೆಸ್‌ನವರು ಗಲಾಟೆ ಮಾಡುತ್ತಾರೆ, ಅದನ್ನು ಒಡೆದುಹಾಕುವುದಕ್ಕೆ ಆಜ್ಞೆ ಮಾಡುತ್ತಾರೆ, ಆದರೆ ನಾವು ಅಧಿಕಾರಕ್ಕೆ ಬಂದರೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟರು. ಆದರೆ ಇವತ್ತು ಚುನಾವಣೆಯಲ್ಲಿ ಗೆದ್ದುಬಂದಮೇಲೆ ಆಗ ಕೊಟ್ಟಿದ್ದಂಥ ಆಶ್ವಾಸನೆಯನ್ನು ಮುರಿದಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಆಶ್ವಾಸನೆಯನ್ನು ಕೊಡುವಂಥ ಭಾಷಣವನ್ನು ನಾನು ಮಾಡಿಯೇ ಇಲ್ಲ.

ಶ್ರೀ ವೈ. ರಾಮಕೃಷ್ಣ.—ಮಂತ್ರಿಯಾದಮೇಲೆ ತಾವು ಆಶ್ವಾಸನೆಯನ್ನು ಮುರಿದಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಕ್ರಾಂತಿರಂಗ ಮತ್ತು ಜನತಾ ಪಕ್ಷ ಇಬ್ಬರೂ ಸೇರಿ ಹೊರಡಿಸಿದ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಕಾಣಿಸಿದ್ದೇವೆ. ತಾವು ದಯವಿಟ್ಟು ಅದನ್ನು ಓದಿನೋಡಿ. ನಾವು ಹಗಲೂ ರಾತ್ರಿ ಕೂತು ಬರೆದು ಅದನ್ನು ಪ್ರಿಂಟ್ ಮಾಡಿಸಿದ್ದೇವೆ. ರೆವಿನ್ಯೂ ಜಾಗದಲ್ಲಿ ಮನೆಗಳನ್ನು ಯಾರಾದರೂ ಅನಧಿಕೃತವಾಗಿ ಕಟ್ಟಿಕೊಂಡರೆ ಅದಕ್ಕೆ ಏನು ಮಾಡಬೇಕೆನ್ನುವ ಬಗ್ಗೆ ಯೋಚನೆ ಮಾಡಿ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಇವತ್ತು ನಮ್ಮ ಚುನಾವಣಾ ಪ್ರಣಾಳಿಕೆಯ ಪ್ರಕಾರ ರಸ್ತೆಯಲ್ಲಿ ಬರತಕ್ಕ ಒಂದೆರಡು ಮನೆಗಳನ್ನು ಒಡೆದು ಹಾಕಿ ಅವರಿಗೆ ಬೇರೆ ಕಡೆ ಜಾಗವನ್ನು ಕೊಟ್ಟರೂ ಕೂಡ ನೀಡಿದಂಥ ಆಶ್ವಾಸನೆಯನ್ನು ಮುರಿದಂತಾಗುತ್ತದೆ. ಅಂದರೆ ಇವತ್ತು ನಿಮ್ಮ ಆಶ್ವಾಸನೆಯನ್ನು ನೀವೇ ಮುರಿದಿದ್ದೀರಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವರು ಯಾವ ಮಾತನ್ನು ತಾನೆ ಉಳಿಸಿಕೊಂಡಿದ್ದಾರೆ? ಇವತ್ತು ಅವರು ತಮ್ಮ ಆಶ್ವಾಸನೆಯನ್ನು ಮುರಿದಿದ್ದಾರೆಂದು ತಾವು ಏತಕ್ಕೆ ಹೇಳುತ್ತಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಎಲ್ಲ ಜನರನ್ನು ಒಂದೇರೀತಿಯಿಂದ ಕಾಣಬೇಕು. ಬೆಂಗಳೂರು ನಗರದಲ್ಲಿ ಬಾಣಸವಾಡಿ ಮತ್ತು ಮಡಿವಾಳದಲ್ಲಿ ಒಂದೇಕಡೆಯಲ್ಲ-ಇಡಿ ಕರ್ನಾಟಕದಲ್ಲಿ ಜನತೆ ಕಷ್ಟಪರಿಸ್ಥಿತಿಯಲ್ಲಿ ಬಹಳ ದಿವಸಗಳಿಂದಲೂ ಇದ್ದಾರೆ. ಈ ರೀತಿ ಕಷ್ಟದಲ್ಲಿ ಜೀವನ ಮಾಡತಕ್ಕಂಥ ಒಂದು ಭಾಗದ ಜನರಿಗೆ ಒಂದುರೀತಿಯಾದ ಕಾನೂನನ್ನು ಮಾಡಿದ್ದೀರಿ, ಮತ್ತೊಂದು ಭಾಗದ ಜನರಿಗೆ

ಮತ್ತೊಂದು ರೀತಿಯಲ್ಲಿ ಕಾನೂನು ಮಾಡತಕ್ಕಂಥ ತಿರ್ಮಾನ ಏನು ತೆಗೆದುಕೊಂಡಿರುತ್ತೀರಿ ಇದು ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣವನ್ನು ಇಡತಕ್ಕಂಥ ಕೆಲಸವಾಗಿರುತ್ತದೆ. ಈವತ್ತು ಮಡಿವಾಳ ಬಡಾವಣೆಯ ವಿಚಾರ ನಿಮ್ಮ ಕ್ಷೇತ್ರಕ್ಕೆ ಬರತಕ್ಕಂಥ ವಿಚಾರ. ಆದ್ದರಿಂದ ಅವರಿಗೆ ಅನುಕೂಲ ಮಾಡತಕ್ಕಂಥ ಕೆಲಸ ಕೈಗೊಂಡಿದ್ದೀರಿ. ನಾನು ಹೇಳುವುದೇನೆಂದರೆ ಈ ಭಾಗದಲ್ಲಿ ಇರತಕ್ಕ ರೆವಿನ್ಯೂ ಜಾಗದಲ್ಲಿ ಎಲ್ಲೆಲ್ಲಿ ಮನೆಗಳನ್ನು ಕಟ್ಟಿದ್ದಾರೆ, ಅವರೆಲ್ಲರಿಗೂ ರಿ-ಕನ್ವೆ ಮಾಡಲು ತೀರ್ಮಾನ ತೆಗೆದುಕೊಂಡ ಹಾಗೆ, ಎಲ ಕಡೆಯವರಿಗೂ ರಿಕನ್ವೆ ಮಾಡಲು ತೀರ್ಮಾನ ತೆಗೆದುಕೊಂಡು, ಅವರವರಿಗೆ ಮನೆಗಳನ್ನು ಖಾಯಂ ಮಾಡತಕ್ಕಂಥ ತೀರ್ಮಾನ ಮಾಡಿ. ಬಾಣಸವಾಡಿ, ರಾಜಾಜಿನಗರ, ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜ್ ಫಸ್ಟ್ ಸ್ಟೇಜ್, ಸೆಕೆಂಡ್ ಸ್ಟೇಜ್ ಇವರಿಗೆಲ್ಲ ಏತಕ್ಕೆ ಈ ಕಾನೂನನ್ನು ಅಳವಡಿಸಲಿಲ್ಲವೆನ್ನುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ನಾನು ಉತ್ತರಹಳ್ಳಿ ಕ್ಷೇತ್ರದಿಂದ ಬರತಕ್ಕಂಥ ಸದಸ್ಯನಾಗಿರುತ್ತೇನೆ. ನನ್ನ ಕ್ಷೇತ್ರದ ಸುಮಾರು ಹೆಚ್ಚಿನ ಭಾಗದಲ್ಲಿ ಈರೀತಿಯಾಗಿ ಮನೆಗಳನ್ನು ಕಟ್ಟಿಕೊಂಡು ವಾಸಮಾಡತಕ್ಕಂಥ ಜನರೇ ಜಾಸ್ತಿ ಇರುತ್ತಾರೆ. ಯಾರು ಯಾರು ಸಂಘಸಂಸ್ಥೆಗಳನ್ನು ಮಾಡಿಕೊಂಡಿರುತ್ತಾರೆ, ಅಂಥವರಿಗೆಲ್ಲ ಬಿ.ಡಿ.ಎ.ನವರು ರಿ-ಕನ್ವೆ ಮಾಡಿಕೊಟ್ಟಿರುತ್ತಾರೆ. ಮನೆಗಳನ್ನು ಒಡೆಸಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳತಕ್ಕಂಥದ್ದು ಔಟ್ ಆಫ್ ಬೌಂಡರಿ ವಿಚಾರವನ್ನು ಹೇಳುತ್ತಿದ್ದಾರೆ. ನಾನು ಬೆಂಗಳೂರು ಬೌಂಡರಿ ಒಳಗಡೆ ಇರತಕ್ಕಂಥದ್ದನ್ನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಹಾಗೆಯೇ ಖಾಯಂ ಮಾಡಿಕೊಳ್ಳಲಿ, ಬಹಳ ಸಂತೋಷ.

ಶ್ರೀ ವೈ. ರಾಮಕೃಷ್ಣ.--ಈಗ ತಮ್ಮ ಕ್ಷೇತ್ರದಲ್ಲಿ ಬರತಕ್ಕಂಥ ಮನೆಗಳಿಗೆ ಡಿ-ನೋಟಿಫೈ ಮಾಡುವುದಾದರೆ ಬೆಂಗಳೂರು ಸಿಟಿಯಲ್ಲಿ ಬರತಕ್ಕಂಥದ್ದನ್ನು ಏತಕ್ಕೆ ಡಿ. ನೋಟಿಫೈ ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.--ಡಾ॥ ತಿಮ್ಮೇಗೌಡರು ಹೇಳಿದಹಾಗೆ ಹೇಳುತ್ತಿದ್ದಾರೆ. ಇದನ್ನೆ ನಾವು ವಿರೋಧಪಕ್ಷದಲ್ಲಿದ್ದಾಗಿನಿಂದಲೂ ಕೇಳಿಕೊಂಡು ಬಂದಿರುತ್ತೇವೆ.

ಶ್ರೀ ವೈ. ರಾಮಕೃಷ.--ಡಿ.ನೋಟಿಫೈ ಮಾಡುವುದಾದರೆ ಎಲ್ಲರಿಗೂ ಒಂದೇ ಕಾನೂನು ಇರಬೇಕು.

ಶ್ರೀ ಎಂ. ಚಂದ್ರಶೇಖರ್.--ರಾಜಾಜಿನಗರ ಕ್ಷೇತ್ರ ನನ್ನ ಕ್ಷೇತ್ರಕ್ಕೆ ಬರುವುದಿಲ್ಲ, ನನ್ನ ಕ್ಷೇತ್ರವಲ್ಲದಿದ್ದರೂ ಈ ಕೆಲಸ ವಯಡಿಯೇ ಮಾಡುತ್ತೇವೆ,

Resolution seg; Sucerssful mission and safe landing of Indo Soviet Cosmonauts viz-Rakesh Sharma and two other Russians.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ನಮ್ಮ ಈ ಸಭೆಗೆ ಒಂದು ಸಂತೋಷದ ವಿಚಾರವನ್ನು ಹೇಳಬೇಕಾಗಿರುತ್ತದೆ. ಬಾಹ್ಯಾಕಾಶ ಯಾನವನ್ನು ಕೈಗೊಂಡಿದ್ದ ಶ್ರೀಯುತ ರಾಕೇಶ್ ಶರ್ಮರವರು ಬಹಳ ಸುರಕ್ಷಿತವಾಗಿ ಧರೆಗೆ ಇಳಿದಿದ್ದಾರೆಂದು ವರ್ತಮಾನ ಬಂದಿದೆ. ಈ ವಿಚಾರದಲ್ಲಿ ನಾವು ವಿಶೇಶವಾದ ಸಂತೋಷವನ್ನು ಮತ್ತು ಅಭಿನಂದನೆಗಳನ್ನು ರಾಕೇಶ್ ಶರ್ಮರವರಿಗೂ ಮತ್ತು ಅವರ ರಷ್ಯನ್ ಸಹಚರರಿಗೂ ಈ ಸದನದಮೂಲಕ ಸಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿರುತ್ತಾರೆ, ಇದು ಬಹಳ ಸಂತೋಷದ ವಿಚಾರ, ಇದು ನಮಗಷ್ಟೇ ಅಲ್ಲ ಇಡಿ ಭಾರತ ದೇಶಕ್ಕೆ ಒಂದು ಹೆಸರು ಬರತಕ್ಕಂಥ ವಿಚಾರವಾಗಿದೆ.

Sri S. Bangarappa.—Let us adopt a Resolution to that effect since it is a big feat achieved by a first Indian Cosmonaut Sri Rakesh Sharma alongwith two other Russian Cosmonauts. ಬಹಳ ಸಂತೋಷವಾಗಿ ಇರತಕ್ಕಂಥ ವಿಚಾರ, ರಾಕೇಶ್ ಶರ್ಮ ಮತ್ತು ರಷ್ಯಾದ ಕಾಸ್‌ಮೋನೆಟ್ಸ್ ಧರೆಗೆ ಸುರಕ್ಷಿತವಾಗಿ ಬಂದಿರುವುದಕ್ಕಾಗಿ ರಾಜ್ಯಸರ್ಕಾರ ಮತ್ತು ನಮ್ಮ ಕೇಂದ್ರ ಸರ್ಕಾರದವರು ಗಗನಯಾತ್ರಿಗಳಿಗೆ

ಸಂತೋಷವನ್ನು ವ್ಯಕ್ತಪಡಿಸಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು ಎನ್ನುವ ಅಭಿಪ್ರಾಯಕ್ಕೆ ನಾವು ಎಲ್ಲರೂ ಒಕ್ಕೊರಲಿನಿಂದ ತೀರ್ಮಾನವನ್ನು ಮಾಡಬೇಕೆಂದು ಮಾನ್ಯ ಅಧ್ಯಕ್ಷರನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನಮ್ಮ ಭಾರತದೇಶದವರು ಈ ಸಾಧನೆಯನ್ನು ಮಾಡಿರುವುದು ಸಂತೋಷ ವನ್ನುಂಟುಮಾಡಿದೆ. ಅದರಲ್ಲೂ ಶ್ರೀಯುತ ರಾಕೇಶ್ ಶರ್ಮರವರು ಗಗನಯಾನದಲ್ಲಿರುವಾಗಲೂ ಕೂಡ ಯೋಗಾಸನ ಮಾಡುತ್ತಿದ್ದರು ಎಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅವರು ಯಾವುದೇ ತೊಂದರೆ ಇಲ್ಲದರೀತಿಯಲ್ಲಿ ಧರೆಗೆ ಇಳಿದಿದ್ದರಿಂದ

This House conveys the congratulations to both Russian and Indian Government on the Successful Completion of the Indo-Soviet Joint Space Mission. The House also congratulates Sri Rakesh Sharma First Indian Cosmonaut and two other Russian Cosmonauts on their successful mission and safe landing.

**The Resolution was adopted unanimously**

ಡಾ|| ಎಚ್.ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ಪತ್ರಿಕಾಕರ್ತರು ಆಲ್ ಇಂಡಿಯನ್ ಏರ್ ಫೋರ್ಸ್‌ನವರನ್ನು ಭೇಟಿಮಾಡಿ ಶ್ರೀಯುತ ರಾಕೇಶ್ ಶರ್ಮರವರಿಗೂ ಮತ್ತು ಧರೆಯಲ್ಲಿ ಇದ್ದು ಇವರಿಗೆ ಸಹಕರಿಸಿದ ಮಲ್ಹೋತ್ರರವರಿಗೂ ನಿಮ್ಮ ಇಲಾಖೆಯಿಂದ ಬಡ್ತಿ ಕೊಡತಕ್ಕಂಥ ಯೋಚನೆಯನ್ನೇನಾದರೂ ಮಾಡಿದ್ದೀರಾ ಎಂದು ಕೇಳಿದ್ದಕ್ಕೆ, ಸರಿಯಾದ ಉತ್ತರ ಬಂದಿಲ್ಲ. ಇದು ಟಿ.ವಿ.ಯಲ್ಲೂ ಸಹ ಬಂದಿದೆ. ಅದರ ಬಗ್ಗೆಯೂ ಕೂಡ ನಮ್ಮ ಸರ್ಕಾರದವರು ರೆಕ್‌ಮೆಂಡೇಷನ್ ಕಳುಹಿಸಿಕೊಡತಕ್ಕಂಥದ್ದು ಸೂಕ್ತವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಇದು ಅವಶ್ಯಕತೆ ಇಲ್ಲ. ಇದು ನಮ್ಮ ಪರಿಮಿತಿಗೆ ಬರುವುದಿಲ್ಲ. ಏತ ಕ್ಕೆಂದರೆ ಇದು ಡಿಫೆನ್ಸ್‌ಗೆ ಸಂಬಂಧಪಟ್ಟದ್ದಾಗಿರುತ್ತದೆ.

Sri S. Bangarappa.—Sir the matter referred to by the hon. Member Sri H.L. Thimmegowda does not come under the purview of the State Government. It pertains to the Ministry of Defence Government of India.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಥ ಒಂದು ಸಂತೋಷದ ಸಂದರ್ಭದಲ್ಲಿ ಯಾರನ್ನೂ ಇಕ್ಕ ಟ್ಟಿಗೆ ಸಿಕ್ಕಿಸತಕ್ಕಂಥ ಪ್ರಯತ್ನ ತಪ್ಪಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಅವರಿಗೆ ಭಗವಂತನು ಆಯುರಾರೋಗ್ಯ ಸಂಪತ್ತು ಎಲ್ಲವನ್ನು ಕೊಟ್ಟು ಇಂಥ ಕಾರ್ಯ ಮುಂದಕ್ಕೂ ಆಗಲಿ, ಎನ್ನುವ ವಿಷಯ ಗೊತ್ತುವಳಿಯಲ್ಲಿ ಬರಲಿ ಎಂದು ಹೇಳುತ್ತೇನೆ.

ಅಲ್ಪಕಾಲಾವಧಿ ಚರ್ಚೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಎಷ್ಟೋ ಸೌಲಭ್ಯಗಳನ್ನು ಸರ್ಕಾರದ ಖರ್ಚಿನಲ್ಲಿ ಕೊಟ್ಟಿರುತ್ತಾರೆ. ನೀರು, ದೀಪ, ಸ್ಕೂಲ್ ಚರ್ಚ್, ಮಸೀದಿ ಇದೆಲ್ಲವನ್ನು ಕೊಟ್ಟು ಈಗ ಕೈಬಿಡು ತ್ತೇವೆಂದು ಹೇಳತಕ್ಕಂಥ ಮಾತು ಜನರಿಗೆ ತೊಂದರೆಯಾಗುತ್ತದೆ. ಅಲ್ಲಿ ಯಾರು ಜೀವನ ಮಾಡುತ್ತಿರು ತ್ತಾರೆ ಅವರೆಲ್ಲರೂ ಬಡವರಾಗಿರುತ್ತಾರೆ. ಬಹಳ ಕಷ್ಟಪಟ್ಟು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ರೋಡು ವಗೈರೆ ಮಾಡತಕ್ಕಂಥ ಸಂದರ್ಭದಲ್ಲಿ ಅಡ್ಡ ಬರತಕ್ಕಂಥ ಮನೆಗಳನ್ನು ಒಡೆದುಹಾಕಿ, ಆದರೆ ಅವರು ಮಲ್ಲೇಶ್ವರಂ ಬ್ಯಾಂಕ್‌ನಿಂದ, ಕೆನರಾ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರ ಸಾಲವನ್ನು ಯಾರು ತೀರಿಸುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಯಾವಾಗ ಜಮೀನು ಅವನದಲ್ಲ, ಆಗ ಆ ಜಾಗಕ್ಕೆ ಹಕ್ಕುದಾರನಲ್ಲ.

ಶ್ರೀ ಎಸ್. ಬಂಗಾರಪ್ಪ—ಏತಕ್ಕೆ ಇಲ್ಲ ?

ಶ್ರೀ ಎಂ. ಚಂದ್ರಶೇಖರ್.—ಸರಿಯಾದ ಡಾಕ್ಯುಮೆಂಟ್ ಇಲ್ಲದಿದ್ದರೆ ಯಾವ ಬ್ಯಾಂಕ್ ಸಾಲ ವನ್ನು ಕೊಡುವುದಿಲ್ಲ. ಕೊಟ್ಟಿದ್ದೆ ಆದರೆ ಅಂಥ ಬ್ಯಾಂಕ್ ದಿವಾಳಿಯಾಗುತ್ತದೆ.

Sri S. Bangarappa.--That is the subject matter again. It reminds me of your statement made at Bijapur when you Bulldozed the Houses at Chikkamaranahalli.

ಶ್ರೀ ಎಂ. ಚಂದ್ರಶೇಖರ್.—ಆಸ್ತಿ ನನ್ನದಲ್ಲ ಎಂದು ಗೊತ್ತಾದರೆ, ನನಗೆ ಯಾವ ಬ್ಯಾಂಕೂ ಕೂಡ ಸಾಲವನ್ನು ಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರದಲ್ಲಿ ಕಾನೂನಿನ ಒಂದು ಕ್ರಮವನ್ನು ನೋಡಬಾರದು. ಹ್ಯುಮಾನಿಟಿ ಗ್ರೌಂಡ್ಸ್‌ನಿಂದ ನೋಡಬೇಕು. ಅದಕ್ಕೋಸ್ಕರವಾಗಿ ನಾನು ಏನು ಹೇಳುತ್ತೇನೆ ಎಂದರೆ ಕಾನೂನು ಪ್ರಕಾರ ಜಾಗವನ್ನು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ. ರೆವಿನ್ಯೂ ಜಾಗ ತೆಗೆದುಕೊಂಡಿರುತ್ತಾರೆಂದು, ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆಂದು ಒಡೆಸುವುದು ಸರಿಯಾದ ಮಾರ್ಗವಲ್ಲ. It is your responsibility to provide a site or a house which is one of the basic needs of a human being to eke out his livelihood. Have you discharged your duties ?

ಆ ಜನರ ಹತ್ತಿರವಿರುವುದು ಸರಿಯಾದಂಥ ಡಾಕ್ಯುಮೆಂಟ್ಸ್ ಅಲ್ಲವೆಂದು ತಾವು ಹೇಳುವಂತಹ ವಾದ ಸರಿಯಾದುದಲ್ಲ. ಒಂದುವೇಳೆ ತಮ್ಮ ವಾದವನ್ನು ಒಪ್ಪಿಕೊಂಡರೂ ಸಹ ಅವರು ಕಟ್ಟಿಸಿಕೊಂಡಿರುವಂತಹ ಮನೆಗಳನ್ನು ಪೋಲೀಸರ ಸಹಾಯದಿಂದ ಬುಲ್ಡೋಜರ್ ಮೂಲಕ ನೆಲಸಮ ಮಾಡುವುದು ಒಳ್ಳೆಯ ಕೆಲಸವಲ್ಲ. ಈ ವಿಚಾರದಲ್ಲಿ ಸರ್ಕಾರದ ಮೇಲೆ ನಾನು ಒತ್ತಡ ತರುವುದೇನೆಂದರೆ, ಮೊನ್ನೆಯ ಚುನಾವಣೆಯಲ್ಲಿ ಈ ಜನರು ಸಹ ಓಟು ಕೊಟ್ಟಿದ್ದಾರೆ. ಆ ಕ್ಷೇತ್ರದ ಶಾಸಕರಾದಂಥ ಶ್ರೀ ಶ್ರೀನಿವಾಸ್ ಅವರು ...

5-00 p.m.

ಶ್ರೀ ಎಂ. ಚಂದ್ರಶೇಖರ್.—ಅದು ಶ್ರೀ ಸೂರ್ಯನಾರಾಯಣ ರಾವ್ ಅವರ ಕ್ಷೇತ್ರದಲ್ಲಿ ಬರುತ್ತದೆ

ಶ್ರೀ ಎಸ್. ಬಂಗಾರಪ್ಪ.—ಶ್ರೀ ಶ್ರೀನಿವಾಸ್ ಅವರ ಕ್ಷೇತ್ರಕ್ಕೂ ಈ ಜಾಗದಲ್ಲಿ ಸ್ವಲ್ಪ ಭಾಗ ಸೇರಬಹುದು. ತಮ್ಮ ಪರವಾಗಿ ವಾದ ಮಾಡಲು ಆ ಭಾಗದ ಶಾಸಕರು ಯಾರೂ ಮುಂದೆ ಬರುವುದಿಲ್ಲ ಎಂದು ಅಲ್ಲಿನ ಜನರು ಪದೇಪದೇ ಹೇಳುತ್ತಿದ್ದಾರೆ, ಆದ್ದರಿಂದ ಆ ಭಾಗದ ಶಾಸಕರು ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು. ಈಗ ಅಲ್ಲಿ ಕಟ್ಟಿರುವಂಥ ಮನೆಗಳನ್ನು ಕೆಡವಿ ಹಾಕುವ ವಿಚಾರದಲ್ಲಿ ನಾನಂತೂ ವಿರೋಧವಾಗಿದ್ದೇನೆ. ಆದರೆ ಎಲ್ಲಿ ರಸ್ತೆಗಳು ಬರುತ್ತವೆ, ಅಂತಹ ಕಡೆ ಅನಿವಾರ್ಯವಾಗಿ ಅಡ್ಡಿ ಬರುವಂತಹ ಮನೆಗಳನ್ನು ಕೆಡವಿ ಹಾಕಬೇಕಾಗುತ್ತದೆ. ಇದನ್ನು ನಾನೂ ಸಹ ಒಪ್ಪುತ್ತೇನೆ. ವಾಹನ ಸಂಚಾರಕ್ಕೆ ಅಡ್ಡ ಬರುವಂಥ ಕಡೆಗಳಲ್ಲಿ ಮತ್ತು ಹೊಸದಾಗಿ ರಸ್ತೆಗಳನ್ನು ಮಾಡುವಂತಹ ಕಡೆಗಳಲ್ಲಿ ಮನೆಗಳು ಏನಾದರೂ ಅಡ್ಡ ಬಂದರೆ ಅನಿವಾರ್ಯವಾಗಿ ಕೆಡವಿ ಹಾಕಬೇಕಾಗುತ್ತದೆ, ಆದರೆ ಇದು ಆದಷ್ಟು ಕಡಿಮೆ ಪ್ರಮಾಣದಲ್ಲಿರಬೇಕು. ಆದರೆ ಇದು ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ, ಮೊದಲೇ ಬಿ.ಡಿ.ಎ. ಮೂಲಕ ಲೇಔಟ್ ಮಾಡಲಾಗಿತ್ತು ಎಂಬ ಕಾರಣದಿಂದ ತಮಗಿಷ್ಟಬಂದ ರೀತಿಯಲ್ಲಿ ರಸ್ತೆಗಳನ್ನು ಮಾಡಿದರೆ ಅನೇಕ ಜನರಿಗೆ ತೊಂದರೆಯಾಗುತ್ತದೆ, ಈ ಹಿಂದೆ ಕೂಡ ಈ ವಿಚಾರ ಇಲ್ಲಿ ಚರ್ಚೆಗೆ ಬಂದಾಗ, ಮಾನ್ಯ ಮಂತ್ರಿಗಳು ಪೂರ್ತಿಯಾಗಿ ಬಿ.ಡಿ.ಎ. ಮೇಲೆ ಡಿಪೆಂಡ್ ಆಗಬಾರದು. ಶಾಸನ ಸಭೆಯ ಒಂದು ಸಮಿತಿ ಹೋಗಿ ನೋಡಿಕೊಂಡು ಬರಬೇಕು ಎಂದು ಸಲಹೆ ಮಾಡಿದ್ದೆ. ಆದರೆ ತಾವು ಇದರ ಕಡೆ ಗಮನ ಕೊಡಲಿಲ್ಲ. The Hon. Minister Mr. Chandrashekar will certainly become a big target. Don't forget my words. Since the matter has acquired a very big dimension and since it is very big matter. I am forewarning you. Don't become target. ನಿಮ್ಮ ಮೇಲೆ ನಾನು ಯಾವುದೇ ಜವಾಬ್ದಾರಿ ಹಾಕುವುದಕ್ಕೆ ತಯಾರಿಲ್ಲ. ಅಧಿಕಾರಿಗಳ ಸಹಾಯವಿಲ್ಲದೆ ಯಾವುದೇ ಕೆಲಸ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ನಾವು ಅಧಿಕಾರಕ್ಕೆ ಬಂದರೂ ಸಹ ಅಧಿಕಾರಿಗಳ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಅಧಿಕಾರಿಗಳ ಸಹಾಯ ಪಡೆದುಕೊಳ್ಳಿ. ಅವರೂ ಸಹ ಇರಬೇಕು. ಅದರ ಜೊತೆಗೆ ಈ ಸದನದಲ್ಲಿರುವಂತಹ ಎಲ್ಲ ಪಕ್ಷಗಳ ಸದಸ್ಯರೂ ಸಹ ಹೋಗಿ ನೋಡಿಕೊಂಡು ಬರುವುದು ಒಳ್ಳೆಯದು. That goes in your own interest and the interests of the poorer lot who have put up constructions in that area. ಆದ್ದರಿಂದ ಶಾಸಕರುಗಳ ಜೊತೆಯಲ್ಲಿ ತಾವೂ ಸಹ ಹೋಗಿ ನೋಡಿಕೊಂಡು ಬರುವುದು ಒಳ್ಳೆಯದು. ತಾವು ಆ ಏರಿಯಾದಲ್ಲಿ 60 ಅಡಿ ಅಗಲದ ಹಾಗೂ 80 ಅಡಿ ಅಗಲದ ರಸ್ತೆಗಳನ್ನು ಮಾಡಿಸುವಾಗ ಹೆಚ್ಚಿನ ಮನೆಗಳು ಹೋಗದಂತೆ

ತಾವು ನೋಡಿಕೊಳ್ಳಬೇಕು. ಇದಕ್ಕೂ ಮೊದಲು ಈ ಸದನದ ಒಂದು ಸಮಿತಿ ಅಲ್ಲಿಗೆ ಹೋಗಿ ನೋಡಲು ವ್ಯವಸ್ಥೆಯಾಗಬೇಕು. ಈ ಸಮಿತಿಯು ಜೊತೆಯಲ್ಲಿ ಮಾನ್ಯ ಮಂತ್ರಿಗಳು ಸಹ ಹೋಗಿ ಬರಲಿ. Please take everybody into your confidence. Please do that ಅಲ್ಲಿ ಯಾವುದಾದರು ಕೆಲವು ಮನೆಗಳು ನಿಜವಾಗಿಯೂ ರಸ್ತೆಗೆ ಅಡ್ಡ ಬಂದಿದ್ದರೆ ಅಂತಹವರಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ಮನೆಗಳನ್ನು ಬಿಟ್ಟುಕೊಡಬೇಕಾಗುತ್ತದೆಂದು ನಾವೂ ಸಹ ಹೇಳುತ್ತೇವೆ. We will request that person who is the owner of that buidling. ಈ ರೀತಿ ಮಾಡುವುದಕ್ಕೆ ಮೊದಲೇ ಏನಾದರೂ ಬಿ. ಡಿ. ಎ. ನವರು ಅಲ್ಲಿಗೆ ಹೋಗಿ ಮನೆಗಳನ್ನು ಕೆಡವಿ ಹಾಕಿದರೆ ಬಹಳ ಜನರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಈಗಾಗಲೇ ಆನೇಕ ಜನರು ಸಾಲಸೋಲ ಮಾಡಿ ಮನೆಗಳನ್ನು ಕಟ್ಟಿಕೊಂಡು ಸುಸ್ತಾಗಿದ್ದಾರೆ. ಇಂತಹವರ ಮನೆಗಳನ್ನು ಕೆಡವಿ ಹಾಕುವುದಕ್ಕೆ ಮೊದಲು ಈ ಸದನದ ಒಂದು ಸಮಿತಿ ಹೋಗಿ ನೋಡಿಕೊಂಡು ಬರಬೇಕು. Till then in the name of layout rcad please do not try to demolish any building. Not even a single building should be touched. ಈ ಹಿಂದೆ ಚಿಕ್ಕಮಾರನಹಳ್ಳಿಯಲ್ಲಿ ಜನರು ಕಟ್ಟಿಕೊಂಡಿದ್ದ ಮನೆಗಳನ್ನು ಬುಲ್ಡೋಜರ್ ಮೂಲಕ ನೆಲಸಮ ಮಾಡಿದ ನಂತರ ತಾವು ಮಾಡಿದ್ದೇ ಸರಿ ಎಂದು ಬಿಜಾಪುರದಲ್ಲಿದ್ದುಕೊಂಡೇ ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟರು. ಈ ಒಂದು ಘಟನೆ ನಡೆದಾಗ ತಮ್ಮ ಮೇಲೆ ಎಂತಹ ವಿಚಾರಣೆ ಆಗಬೇಕಾಗಿತ್ತು ತಮಗೆ ಗೊತ್ತೇನು ? ಆದರೆ ಆದ ತಪ್ಪನ್ನು ನೀವು ಒಪ್ಪಿಕೊಂಡ ಕಾರಣದಿಂದ ನಾವು ಸುಮ್ಮನಾದೆವು. ಆದೇ ಸಮಯದಲ್ಲಿ ಮಾನ್ಯ ರಘುಪತಿಯವರು ಈ ರೀತಿ ಮಾಡಿದ್ದು ತಪ್ಪು, ಇದಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡುತ್ತೇವೆ ಎಂದು ಹೇಳಿಕೆ ಕೊಟ್ಟರು. ಈ ಇಬ್ಬರು ಮಂತ್ರಿಗಳು ಆ ಸಮಯದಲ್ಲಿ ಒಂದೇ ಕಡೆ ಇರದಿದ್ದ ಕಾರಣದಿಂದ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ಕೊಟ್ಟರು.

ಶ್ರೀ ಎಂ. ರಘುಪತಿ.—ಆ ಸಮಯದಲ್ಲಿ ನಾನು ವಿಜಯವಾಡದಲ್ಲಿದ್ದೆ.

ಶ್ರೀ ಎಸ್. ಬಂಗಾರಪ್ಪ. ಈ ಘಟನೆ ನಡೆದ ನಂತರ ಮಾನ್ಯ ಮಂತ್ರಿಗಳು ಅಲ್ಲಿಂದ ಕೂಡಲೇ ಇಲ್ಲಿಗೆ ವಾಪಸು ಬಂದು ಜನರಿಗೆ ಸಮಾಧಾನ ಮಾಡುವ ಒಂದು ಭರಾಟೆಯಲ್ಲಿ ಜನರ ಹೆಗಲ ಮೇಲೆ ಕೈಹಾಕಿದರು. ಆ ಜನರಿಗೆ ಪ್ರೀತಿಯಾಗಲಿ ಎಂದು ತಬ್ಬಿಕೊಂಡರು. ಶ್ರೀ ಆಳ್ವ ಆವರು ಮಾಡುವಂತೆ ಇವರೂ ಸಹ ಜನರ ಹೆಗಲ ಮೇಲೆ ಕೈಹಾಕಿದರು. ಅಷ್ಟೇ ಆಲ್ಲ, ಇವರು ಮಂತ್ರಿಗಳಾಗಿದ್ದರೂ ಸಹ ಸರ್ಕಾರ ಮಾಡಿದ್ದು ತಪ್ಪು, ಮನೆ ಕಳೆದುಕೊಂಡವರಿಗೆ ಸರ್ಕಾರ ಪರಿಹಾರ ಕೊಡುತ್ತದೆಂದು ಸಹ ಹೇಳಿಕೆ ಕೊಟ್ಟರು. ಆದು ಪತ್ರಿಕೆಗಳಲ್ಲಿಯೂ ಸಹ ಬಂತು.

ಶ್ರೀ ಎಂ. ರಘುಪತಿ.—ಪತ್ರಿಕೆಗಳಲ್ಲಿ ಬಂದಿಲ್ಲ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಈಗ ತಾವು ಇದನ್ನೆಲ್ಲಾ ಹೇಳಿ ಆವರನ್ನು ಏತಕ್ಕೆ ಇಕ್ಕಟ್ಟಿಗೆ ಸಿಕ್ಕಿಸುತ್ತೀರಿ ?

ಶ್ರೀ ಎಂ. ರಘುಪತಿ.—ಆ ಸಮಯದಲ್ಲಿ ನಾನು ಜನರ ಹೆಗಲ ಮೇಲೆ ಕೈಹಾಕಿದ್ದು ನನಗೆ ಜ್ಞಾಪಕವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಜನರ ಹೆಗಲ ಮೇಲೆ ಕೈಹಾಕಿದ್ದು ನಿಮಗೆ ಜ್ಞಾಪಕವಿಲ್ಲ ಎಂದು ಇವೊತ್ತು ಹೇಳುವುದಾದರೆ, ಸರ್ಕಾರದಿಂದ ಪರಿಹಾರ ಕೊಡುತ್ತೇವೆಂದು ನೀವು ಹೇಳಿದ್ದು ಸಹ ನಿಮ್ಮ ಜ್ಞಾಪಕದಲ್ಲಿ ಇಲ್ಲ ಎಂದು ಹೇಳಿದಂತೆ ಆಗುತ್ತದೆ.

ಶ್ರೀ ಎಂ. ರಘುಪತಿ.—ಅಲ್ಲಿ ಮನೆಗಳನ್ನು ಕಳೆದುಕೊಂಡವರ ಪರಿಚಯ ನನಗಿಲ್ಲ. ಆದರೆ ನಾನು ಆ ಕ್ಷೇತ್ರದಲ್ಲ ಹುಟ್ಟಿ ಬೆಳೆದವನಾದ ಕಾರಣ 10–15 ವರ್ಷಗಳಿಂದ ಅಲ್ಲಿರುವ ಆನೇಕ ಜನರ ಪರಿಚಯ ನನಗಿದೆ.

ಶ್ರೀ ಬಿ. ಜಿ. ಪಾಟೀಲ್.—ಮಾನ್ಯ ಆಧ್ಯಕ್ಷರೇ, ಮಾನ್ಯ ಮಂತ್ರಿಗಳು ಬೇರೆ ಜಾಗದಲ್ಲಿ ಕುಳಿತುಕೊಂಡು ಉತ್ತರ ಕೊಡುತ್ತಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ತಮ್ಮ ಜಾಗಕ್ಕೆ ಬರಬೇಕು.

ಶ್ರೀ ಎಸ್. ಬಂಗಾರಪ್ಪ.—ಆವರು ಇಲ್ಲಿಯವರೆಗೆ ಯಾವ ಸೀಟಿನಲ್ಲಿ ಖಾಯಂ ಆಗಿ ಇದ್ದರು. ತಮಗೆ ಆಷ್ಟೂ ಗೊತ್ತಾಗುವುದಿಲ್ಲವೇ ? ಇಂತಹವರಿಗೆ ನಮ್ಮ ಗ್ರಾಮೀಣ ಭಾಷೆಯಲ್ಲಿ ಹಾಲುಂಡಿ

ಎಂದು ಕರೆಯುತ್ತಾರೆ. ಹಾಲುಂಡಿ ಎಂದರೆ, ಅವರು ಎಲ್ಲಿ ಬೇಕಾದರೂ ಇರಬಹುದು, ಯಾವ ಗುಂಪಿನಲ್ಲಿ ಬೇಕಾದರೂ ಇರಬಹುದು, ಯಾವ ಪಕ್ಷದಲ್ಲಿ ಬೇಕಾದರೂ ಇರಬಹುದು, ಆದ್ದರಿಂದ ಮಾನ್ಯ ಮಂತ್ರಿಗಳು ಯಾವ ಸೀಟಿನಲ್ಲಿ ಬೇಕಾದರೂ ಕುಳಿತು ಉತ್ತರ ಕೊಡಲಿ. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಅದು ಏನೇ ಇರಲಿ....

ಶ್ರೀ ಎಂ. ರಘುಪತಿ.—ನಿಮ್ಮ ಅರ್ಥದಲ್ಲಿಯೇ ಹೇಳಬೇಕಾದರೆ, ನಾನು ಒಂದೇ ಸಲ ಬದಲಾವಣೆ ಮಾಡಿರುವುದು. ಆದರೆ ನೀವು ಎಷ್ಟು ಸಲ ಬದಲಾವಣೆ ಮಾಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನಾನೇನೂ ಬದಲಾವಣೆ ಮಾಡಿಲ್ಲ, ಒಂದುವೇಳೆ ನಾನು ಬದಲಾಣೆ ಮಾಡಿದ್ದರೆ, ಅದು ಕಳೆದ ಚುನಾವಣೆಯಲ್ಲಿ ನಿಮ್ಮ ನೆನಪಿಗೆ ಬರಬೇಕಾಗಿತ್ತು. ಆಗ ಏತಕ್ಕೆ ನಿಮ್ಮ ನೆನಪಿಗೆ ಬರಲಿಲ್ಲ ? ಆ ಸಮಯದಲ್ಲಿ ನನ್ನನ್ನು ಹಾಡಿ ಹೊಗಳಿದ್ದೆಲ್ಲಾ ನಡೆಯಲಿಲ್ಲವೇನು ?

ಒಬ್ಬ ಮಾನ್ಯ ಸದಸ್ಯರು.—ಆಗ ನಿಮ್ಮ ಫೋಟೋ ಅವರಿಗೆ ಬೇಕಾಗಿತ್ತು ?

ಶ್ರೀ ಎಸ್. ಬಂಗಾರಪ್ಪ.—ಈಗ ಇದು ನಿಮ್ಮ ನೆನಪಿಗೆ ಬಂತೇನು ? ಆಗ ಇವರಿಗೆ ಇದು ನೆನ್ನಪಿದ್ದರೂ ಹೇಳಲಿಲ್ಲ. ಏಕೆಂದರೆ, ನಿಮಗೆ ಬಂಗಾರಪ್ಪ ಬೇಕಾಗಿತ್ತು, ಅದಕ್ಕೇ ಹೇಳಲಿಲ್ಲ. ಈ ಮಾತನು ನಾನು ಮಾನ್ಯ ಮಂತ್ರಿಗಳನ್ನೇ ಕುರಿತು ಹೇಳುತ್ತಿಲ್ಲ.

ಉಪಾಧ್ಯಕ್ಷರು,—ತಾವು ವಿಷಯಕ್ಕೆ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈಗ ವಿಷಯಾಂತರ ಮಾಡುವುದು ಬೇಡ. ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ಈ ಸದನದ ಒಂದು ಸಮಿತಿ ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು. ಇಲ್ಲಿಯವರೆಗೆ ಈ ಬಡಜನರಿಗೆ ಅನೇಕ ರೀತಿಯ ಸೌಲಭ್ಯಗಳನ್ನು ಕೊಟ್ಟಿದ್ದಾಗಿದೆ. ಆದ್ದರಿಂದ ಅಲ್ಲಿನ ಬಡಜನರಿಗೂ ಸಹ ಕೆಲವು ಸೌಲಭ್ಯಗಳನ್ನು ಕೊಡೋಣ. ಈಗಾಗಲೇ ಅಲ್ಲಿನ ಜನರು ಕೆರಳಿ ಕುಳಿತಿದ್ದಾರೆ. The way the force was taken to the area and the people and their problems were handled has already left a telling effect on the minds of the people in the area. Better avoid that. That is my sincere suggestion. Please think over, ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ ಬಡವರು ಮನೆಗಳನ್ನು ಕಟ್ಟಿಸಿಕೊಳ್ಳುವ ವಿಚಾರದಲ್ಲಿ ಇದ್ದಂಥ ನಿಯಮಗಳನ್ನು ಸಡಿಲಗೊಳಿಸಲಾಯಿತು ಆದ್ದರಿಂದ ಈಗ ಇಲ್ಲಿ ಮನೆ ಕಟ್ಟಿಕೊಂಡಿರುವ ಜನರ ಬಗ್ಗೆಯೂ ಸಹ ತಾವು ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಮೊದಲು ಈ ಸದನದ ಒಂದು ಸಮಿತಿ ಹೋಗಿ ನೋಡಿಕೊಂಡು ಬರಬೇಕು. ಈ ಜನರ ಬಗ್ಗೆ ಗಮನ ಕೊಟ್ಟಿರುವ ಜನರ ಪೈಕಿ ನಾನೂ ಸಹ ಒಬ್ಬ. ನಾಳೆ ತಾವು ಏನಾದರೂ ಅಲ್ಲಿ ಕಟ್ಟಿರುವ ಮನೆಗಳನ್ನು ಕೆಡವಿ ಹಾಕಬೇಕು ಎಂಬ ಅಭಿಪ್ರಾಯಕ್ಕೆ ಬಂದರೆ, ನಾನೇ ಸತ್ಯಾಗ್ರಹ ಮಾಡಬಹುದು. ಆಗ ಇದು ನಮ್ಮ ಒಂದು ಪಕ್ಷದ ಪ್ರಶ್ನೆಯಾಗಿ ಉಳಿಯುವುದಿಲ್ಲ. ಸತ್ಯಾಗ್ರಹದಲ್ಲಿ ಎಲ್ಲ ಪಕ್ಷಗಳವರೂ ಸಹ ಭಾಗವಹಿಸುವ ಸಂದರ್ಭ ಬಂದರೂ ಬರಬಹುದು. ಮತ್ತೊಬ್ಬರು ಸತ್ಯಾಗ್ರಹ ಮಾಡಬಹುದು. ಆದ್ದರಿಂದ ಇದನ್ನೆಲ್ಲಾ ತಪ್ಪಿಸುವ ದೃಷ್ಟಿಯಿಂದ ಎಲ್ಲ ಪಕ್ಷಗಳ ಸದಸ್ಯರೂ ಇರುವಂತಹ ಈ ಸದನದ ಒಂದು ಸಮಿತಿಯನ್ನು ರಚಿಸಬೇಕು. ಆ ಸಮಿತಿಯಲ್ಲಿ ಮಾನ್ಯ ಮಂತ್ರಿಗಳೇ ಚೇರ್‌ಮನ್ ಆಗಿ ಇರಲಿ. ಇವರ ಜೊತೆಗೆ ಶ್ರೀ ರಘುಪತಿಯವರು ಶ್ರೀ ಆಳ್ವ ಅವರೂ ಸಹ ಇರಲಿ. ಹೀಗೆ 3-4 ಜನ ಮಂತ್ರಿಗಳೂ ಸಹ ಇರಲಿ. ಆ ಏರಿಯಾದ ಶಾಸಕರುಗಳಾದಂಥ ಶ್ರೀ ಸೂರ್ಯನಾರಾಯಣರಾವ್ ಅವರು, ಶ್ರೀ ಶ್ರೀನಿವಾಸ್ ಅವರೂ ಸಹ ಇರಲಿ. ಹೀಗೆ ಈ ಸಮಿತಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು, ಕಮ್ಯುನಿಸ್ಟ್ ಪಕ್ಷದ ಸದಸ್ಯರು, ಕ್ರಾಂತಿ ರಂಗದ ಸದಸ್ಯರು ಹಾಗೂ ಇಂಡಿಪೆಂಡೆನ್ಸ್‌ನವರೂ ಸಹ ಇರಲಿ,

ಶ್ರೀ ಬಿ.ಎಸ್. ಯಡಿಯೂರಪ್ಪ,—ನಮ್ಮ ಪಕ್ಷದವರಿಗೂ ಸಹ ಈ ಜನರ ಬಗ್ಗೆ ಸಾಕಷ್ಟು ಕಳಕಳಿ ಇದೆ. ಈ ವಿಚಾರ ನಮಗೆ ತಿಳಿದ ಕೂಡಲೇ ನಾನು ಮತ್ತು ಶ್ರೀ ಆಚಾರ್ಯ ಅವರು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದೆವು, ಈ ವಿಚಾರದಲ್ಲಿ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಶ್ರೀ ಆಚಾರ್ಯ ಅವರು ಈಗಾಗಲೇ ತಿಳಿಸಿದ್ದಾರೆ. ನಮ್ಮ ಪಕ್ಷದ ಹೆಸರನ್ನು ಶ್ರೀ ಬಂಗಾರಪ್ಪನವರು ಹೇಳಲಿಲ್ಲ ಎಂಬ ಕಾರಣಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ. ಈ ಜನರ ಬಗ್ಗೆ ನಮ್ಮ ಪಕ್ಷದವರಿಗೂ ಕಳಕಳಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ನಾನು ಬಿ.ಜೆ.ಪಿ. ಬಗ್ಗೆ ಹೇಳುವುದನ್ನು ಮರೆತುಬಿಟ್ಟೆ ಈ ಸಮಿತಿಯಲ್ಲಿ ಬಿ.ಜೆ.ಪಿ. ನವರೂ ಸಹ ಇರಲಿ.

ಉಪಾಧ್ಯಕ್ಷರು.—ಅವರು ಹೇಳಿದ್ದು ಎಲ್ಲಾ ಪಕ್ಷದ ಸದಸ್ಯರು ಎಂದು.

ಶ್ರೀಎಂ ವೀರಪ್ಪ ಮೊಯ್ಲಿ.-ಬಿ.ಜೆ.ಪಿ. ಯವರು ಸರ್ಕಾರದ ಜೀವತಂತ್ರದ ನಾಡಿ ಇದ್ದಂತೆ. ಆದ್ದರಿಂದ ತಾವು ಅವರನ್ನು ಮಾತ್ರ ಮರೆಯಬಾರದು. ಅವರೂ ಕೂಡ ಸರ್ಕಾರದ ಮೇಲೆ ಒತ್ತಾಯವನ್ನು ತಂದಿದ್ದಾರೆ, ಎಲ್ಲಾ ಪಕ್ಷದ ಶಾಸಕರು ಕೂಡ ಅಲ್ಲಿ ಹೋಗಿ ನೋಡಿಕೊಂಡು ಬಂದು ಸರ್ಕಾರದ ಗಮನವನ್ನು ಸಳೆದಿದ್ದಾರೆ. ಅಲ್ಲಿನ ಸಾರ್ವಜನಿಕರು ಮಾನ್ಯ ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೃಷ್ಣನ್‌ರವರು ಹೇಳಿದ ಹಾಗೆ ಅಲ್ಲಿ ಪೋಲೀಸಿನವರು ಬಹಳ ದುರ್ವರ್ತನೆಯಿಂದ ನಡೆದುಕೊಂಡಿದ್ದಾರೆ. ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ಹೇಳಿದಂತೆ ಸದಸ್ಯರು ಚಳುವಳಿಯನ್ನು ಮಾಡುವುದಕ್ಕೆ ಅವಕಾಶ ಮಾಡಬಾರದೆಂದು ನಾನು ಮತ್ತೊಮ್ಮೆ ಸರ್ಕಾರವನ್ನು ಕೇಳಿಕೊಂಡು ಅಲ್ಲಿ ಯಾರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯವನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯ ಮಂತ್ರಿಗಳು ಈಗಾಗಲೇ ಯಾರಿಗೆ ಅನ್ಯಾಯವಾಗಿದೆಯೋ ಅವರಿಗೆ ಪರಿಹಾರವನ್ನು ಕೊಡುತ್ತೇವೆಂದು ಈ ಸದನದಲ್ಲಿ ಹೇಳಿದ್ದಾರೆ. ಆದ್ದರಿಂದ ನಾವು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಅವರು ನ್ಯಾಯವನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿದ್ದರೆ—

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರಾದಂಥ ಶ್ರೀಮಾನ್ ವಿ.ಎಸ್. ಆಚಾರ್ಯರವರೂ ಕೂಡ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ ನಾವು ಕೂಡ ನಿಯಮ 334ರ ಪ್ರಕಾರ ಒಂದು ನೋಟೀಸ್ ಕಳುಹಿಸಿಕೊಟ್ಟು ಸರ್ಕಾರಕ್ಕೆ ವಿಷಯವನ್ನು ತಿಳಿಸಿದ್ದೇವೆ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ ಈ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಸರ್ಕಾರ ಎಲ್ಲಾ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಂಡು ಅವರಿಗೆ ಸಹಾಯ ಮಾಡುತ್ತೇವೆಂದು ಕೂಡ ತಿಳಿಸಿದ್ದೇವೆ. ಮತ್ತು ಮಾನ್ಯ ಸದಸ್ಯರು ಯಾರೂ ಸತ್ಯಾಗ್ರಹವನ್ನು ಮಾಡುವಂಥ ಅವಶ್ಯಕತೆ ಇಲ್ಲ. ಅಂಥ ಅವಕಾಶವನ್ನು ನಾವು ಕಲ್ಪಿಸಿಕೊಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿ ನೋಡಿ ನಿಮ್ಮ ಜನತಾ ಪಕ್ಷದ ಸದಸ್ಯರು ಕೂಡ ನಮಗೆ ಸಹಕಾರವನ್ನು ಕೊಟ್ಟು ಸತ್ಯಾಗ್ರಹ ಮಾಡುವುದಕ್ಕೆ ಬರುತ್ತಾರಂತೆ. ಆದ್ದರಿಂದ ತಾವು ಅವರಿಗೆ ಬೇಗ ಸಹಾಯ ಮಾಡಿದರೆ ಒಳ್ಳೆಯದು.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ ಸತ್ಯಾಗ್ರಹ ಮಾಡಿ ಉಪವಾಸ ಮಾಡುವಂತಹ ಪರಿಸ್ಥಿತಿಗೆ ನಿಮ್ಮನ್ನು ಸರ್ಕಾರ ಬಿಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಏನಾದರೂ ಒಂದು ಆಶ್ವಾಸನೆಯನ್ನು ಕೊಟ್ಟರೆ ಸಾಲದು ಅದನ್ನು ತಾವು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನಾನು ಭಾರತೀಯ ಜನತಾ ಪಕ್ಷವನ್ನು ಬಿಟ್ಟುಬಿಟ್ಟಿಲ್ಲ. ಅದು ನನ್ನ ಬಾಯಲ್ಲಿ ಇತ್ತು. ಆದರೆ ಆ ಮಾತನ್ನು ನಾನು ಹೇಳಿದ್ದು ಸ್ವಲ್ಪ ತಡವಾಯಿತು ಅಷ್ಟೇ. ನಾನು ನಿಮ್ಮ ಪಕ್ಷದ ಹೆಸರನ್ನು ಹೇಳಬಾರದೆಂದು ಏನೂ ಇಲ್ಲ....

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಅಲ್ಲಿ ಎಲ್ಲಾ ಲ್ಯಾಂಡ್ ಅಕ್ವೈರ್ ಮಾಡಿಕೊಂಡು ನೋಟಿಫೈ ಮಾಡಿದ ಮೇಲೆ, ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರೆ ಏನು ಪ್ರಯೋಜನ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಅಲ್ಲಿ ನಡೆದಿರತಕ್ಕಂಥ ಘಟನೆಯನ್ನು ಪರಿಶೀಲಿಸಲು ಈ ಸದನದ ಒಂದು ಸಮಿತಿಯನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳು ಮನೆಗಳನ್ನು ಎಲ್ಲಿ ಕಟ್ಟಿಕೊಂಡಿರುತ್ತಾರೋ ಅಲ್ಲಿ ನಾವು ರಸ್ತೆ ಮಾಡಬೇಕೆಂದು ಹೇಳಿ ಪ್ರಾಧಿಕಾರದವರು ಮತ್ತು ಪೋಲಿಸಿನವರು ಅಲ್ಲಿನ ಸಾರ್ವಜನಿಕರಿಗೆ ತೊಂದರೆಯನ್ನು ಕೊಟ್ಟಿದ್ದಾರೆ. Can two things take place at the same time and at the same place? ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ಕೇಳಿಕೊಳ್ಳುವುದೇನೆಂದರೆ ಈ ಸದನದ ಒಂದು ಸಮಿತಿಯನ್ನು ಬೇಕಾದರೆ ಮಾಡಲಿ. ಎನ್ನತಕ್ಕಂಥ ಒಂದು ಅಭಿಪ್ರಾಯವನ್ನು ಕೊಟ್ಟು ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಇದುವರೆಗೂ ಮಾತನಾಡಿದಂಥ ಮಾನ್ಯ ಸದಸ್ಯರಿಗೆ ನಾನು ಮಧ್ಯೆ ಮಧ್ಯೆ ಪ್ರವೇಶ ಮಾಡಿ ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಈಗ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ಕೂಡ ನಾನು ಕೆಲವು ಮುಖ್ಯವಾದಂಥ ವಿಷಯಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ನಾವು ಫೆಬ್ರುವರಿ ತಿಂಗಳಲ್ಲಿ ಬಡಾವಣೆಗಳನ್ನು ಮಾಡಬೇಕೆಂದು ಹೊರಟೆವು. ಸುಮಾರು 1129 ಎಕರೆಯಷ್ಟು ಜಮೀನನ್ನು ನಾವು 1976ನೇ ಇಸವಿಯಲ್ಲಿ ನೋಟಿಫೈ ಮಾಡಿದೆವು. ಆದರೆ ಈಗ ನಾವು ರಸ್ತೆಗಳನ್ನು ಮಾಡಿ, ಎಲ್ಲಾ ವ್ಯವಸ್ಥೆಯನ್ನು ಮಾಡಿದ ಮೇಲೆ ನಮಗೆ ಸಿಗುವ ಜಮೀನು ಕೇವಲ 547 ಎಕರೆಗಳು ಮಾತ್ರ. ಇದರಲ್ಲಿ ಸುಮಾರು ಸಾವಿರಾರು ನಿವೇಶನಗಳನ್ನು ವಿಂಗಡಣೆ ಮಾಡಿ ನಾವು ಸಾರ್ವಜನಿಕರಿಗೆ ಹಂಚಬೇಕಾಗಿದೆ. ಈ ನಿವೇಶನಗಳನ್ನು ಸಾರ್ವಜನಿಕರಿಗೆ ಆದಷ್ಟು ಬೇಗ ಹಂಚಬೇಕೆಂಬ ಉದ್ದೇಶದಿಂದ ನಾವು ಅಲ್ಲಿ ರಸ್ತೆಗಳನ್ನು ಮಾಡಲು ಹೊರಟೆವು. ನಾವು ಸಾಮಾನ್ಯವಾಗಿ ನಮ್ಮ ನಕ್ಷೆಯ ಪ್ರಕಾರ ರಸ್ತೆಗಳನ್ನು ಮಾಡಬೇಕಾಗುತ್ತದೆ. ಆ ಪ್ರಕಾರ ಮಾಡಲು ಹೋದಾಗ ಅಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದರು. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಒಬ್ಬರಿಗೆ 100-150 ಅಡಿಗಳು ಮತ್ತೆ 200-300 ಅಡಿಗಳು ಜಮೀನು ವಶಪಡಿಸಿಕೊಂಡು ಅಲ್ಲಿ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡು ಆ ಮನೆಯ ಸುತ್ತಲು ಕಾಂಪೌಂಡ್ ಕಟ್ಟಿಕೊಂಡು ಈ ಜಾಗ ನಮ್ಮದು ಎಂದು ಹೇಳಿಕೊಳ್ಳುತ್ತಿದ್ದಾರೆ. ಆದರೆ ಪ್ರಾಧಿಕಾರದವರು ಸಾರ್ವಜನಿಕರಿಗೆ ಸೈಟ್‌ಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ 30-40 ಸೈಟ್‌ಗಳನ್ನು ವಿಂಗಡಣೆ ಮಾಡಲು ಹೋದಾಗ, ಅಲ್ಲಿ ರಸ್ತೆಗಳನ್ನು ಮಾಡಲು ಹೋದಾಗ ಮನೆಗಳು ಅಡ್ಡ ಬಂದಿವೆ. ಅಂಥ ಮನೆಗಳನ್ನು ಮಾತ್ರ ಪ್ರಾಧಿಕಾರದವರು ಒಡೆದು ಹಾಕಿದ್ದಾರೆ. ಆದರೆ ಅಂಥವರಿಗೆ ನಾವು ಪರಿಹಾರವನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಆದರೂ ಕೂಡ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಶ್ರೀಮಾನ್ ಎಂ. ಎಸ್ ಕೃಷ್ಣನ್‌ರವರು ಹಾಗೂ ಶ್ರೀಮಾನ್ ಬಂಗಾರಪ್ಪನವರು ಹೇಳಿದ ಹಾಗೆ ಅವರ ಮನಸ್ಸಿನಲ್ಲಿ ಒಂದು ಭಯ ಇದೆ. ಆ ಭಯವಾದರೂ ಏನೆಂದರೆ ನಮಗೆ ಈ ಪ್ರಾಧಿಕಾರದವರು ಮನೆಯನ್ನು ಕೊಡುತ್ತಾರೋ ಅಥವಾ ಇಲ್ಲವೋ ಎನ್ನತಕ್ಕಂಥ ಒಂದು ಭಯ ಇದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಅದೇ ಜಾಗದಲ್ಲಿ ಯಾರು ಜಾಗವನ್ನು ಕಳೆದುಕೊಂಡಿರುತ್ತಾರೋ ಅವರಿಗೆ ಅಲ್ಲಿಯೇ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ನಾನು 334ನೇ ನಿಯಮದ ಪ್ರಕಾರ ನೋಟಿಸ್ ಕೊಟ್ಟಿರುತ್ತೇನೆ. ಅಲ್ಲಿ ಒಬ್ಬ ಕ್ರಿಶ್ಚಿಯನ್ ಹೆಣ್ಣು ಮಗಳ ಮೇಲೆ ಪೋಲಿಸಿನವರು ನಡೆಸಿರುವ ದೌರ್ಜನ್ಯದ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ನಾನು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಯಾರಿಗೆ ತೊಂದರೆಯಾಗಿದೆಯೋ ಅವರಿಗೆ ಸರ್ಕಾರ ಪರಿಹಾರ ಕೊಡುತ್ತದೆಂದು.

ಶ್ರೀ ಎಂ. ವೀರಪ್ಪಮೊಯಿಲಿ.—ಆ ಪ್ರದೇಶಕ್ಕೆ ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ಹೋಗಿದ್ದಾರೆ. ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೋಗಿದ್ದಾರೆ. ನಾವು ಸಹ ಅಲ್ಲಿಯ ಜನರನ್ನು ಭೇಟಿಯಾಗಿದ್ದೇವೆ. ಯಾವುದೇ ವಿಷಯವನ್ನು ಎತ್ತುವಾಗ ಅದರ ಸಂಪೂರ್ಣ ತಿಳುವಳಿಕೆ ಇಲ್ಲದೆ ಎತ್ತಬಾರದು. ಆ ರೀತಿ ಪ್ರಸ್ತಾಪಮಾಡಿದರ ನಾಳೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರಾದ ಸತ್ಯನಾರಾಯಣರವರು ಕಾಂಗ್ರೆಸ್‌ನವರು ಭಾರತೀಯ ಜನತಾ ಪಕ್ಷದವರು ಮತ್ತು ಕ್ರಾಂತಿರಂಗದವರು ಅಲ್ಲಿಗೆ ರಾಜಕೀಯ ಮಾಡಲಿಕ್ಕೆ ಹೋಗಿದ್ದಾರೆಂದು ಹೇಳಿದರು. ಆ ರೀತಿ ಯಾರು ತಿಳಿದುಕೊಳ್ಳಬಾರದು, ಆ ರೀತಿ ಮಾಡುವ ಅವಶ್ಯಕತೆ ಇಲ್ಲ. ಸಮಸ್ಯೆ ಜಟಿಲವಾದ ಮೇಲೆ ಕೈಹಾಕುವುದು ಬೇಕಾಗಿಲ್ಲ. ಜನಗಳು ಅಲ್ಲಿ ಬೆಂಕಿಯಾಗಿದ್ದಾರೆ, ನಾವು ನ್ಯಾಯಕ್ಕಾಗಿ ಹೋರಟ ಮಾಡುತ್ತೇವೆಂದು ಹೇಳುತ್ತಾರೆ. ಜನಗಳು ಹೋರಾಟಕ್ಕೆ ಇಳಿದಾಗ ನೀವು ಕಾನೂನನ್ನು ತಗೆದುಕೊಂಡು ಏನೂ ಮಾಡುವುದಕ್ಕೆ ಆಗುವುದಿಲ್ಲ. ಸುಮಾರು 65ಜನ ಕಂಟ್ರಾಕ್ಟರ್‌ಗಳು ಪೀಸ್ ವರ್ಕ್ ಮೇಲೆ ರಸ್ತೆ ಕೆಲಸವನ್ನು ಮಾಡುತ್ತಿದ್ದಾರೆ. ಅಲ್ಲಿ ದೊಂಬಿಯಾಗುತ್ತಿತ್ತು, ನಾವು ಅಲ್ಲಿಗೆ ಹೋಗಿ ಜನಗಳನ್ನು ಸಮಾಧಾನ ಮಾಡದಿದ್ದರೆ ಅಲ್ಲಿ ಗೋಲಿಬಾರ್ ಆಗತಕ್ಕ ಪರಿಸ್ಥಿತಿ ಇತ್ತು. ಸಮಸ್ಯೆ ಜಟಿಲವಾದಾಗ ನೀವು ಸಹಾಯಮಾಡಿಯೆಂದು ಕೇಳಿದರೆ ನಮಗೆ ಆಗ ಕಷ್ಟವಾಗಬಹುದು, ಆಗ ನಿಮಗೆ ಸಹಾಯ ಮಾಡಲಿಕ್ಕೆ ಆಗುವುದಿಲ್ಲ. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಅಲ್ಲಿ ಬೆಂಗಳೂರು

ಅಭಿವೃದ್ಧಿ ಪ್ರಾಧಿಕಾರದವರು ಹೇಗೆ ಕೆಲಸಮಾಡಬೇಕು ? ಇದು ಚಿಕ್ಕಮಾರನಹಳ್ಳಿಯ ತರಹ ಅಲ್ಲ. ಪರಿಸ್ಥಿತಿ ಅದಕ್ಕಿಂತ ವಿಕೋಪಕ್ಕೆ ಹೋಗಿದೆ. ಇದು 60 ಸಾವಿರ ಜನಸಂಖ್ಯೆಯ ಪ್ರಶ್ನೆ. ಒಂದೂವರೆ ಲಕ್ಷ ಜನರ ಮುಂದೆ ಎರಡು ಮೂರು ಸಾವಿರ ಪೋಲೀಸರು ನಿಂತರೆ ಏನು ಮಾಡುವುದಕ್ಕೆ ಆಗುತ್ತದೆ ? ಇದರ ಬಗ್ಗೆ ಎನ್‌ಕ್ವೈರಿ ಮಾಡಲು ಸದನದ ಸಮಿತಿಯನ್ನು ಮಾಡಬೇಕು. ತಾವು ಜನಗಳನ್ನು ಸಮಾಧಾನ ಮಾಡದೆ ಕಾನೂನಿನಿಂದ ಕೆಲಸ ಮಾಡುತ್ತೇವೆಂದು ಹೇಳಿದರೆ, ಅಲ್ಲಿನ ಜನರು ಅಧಿಕಾರಿಗಳನ್ನು ಕಂಡರೆ ಕೆಂಡಕಾರುತ್ತಾರೆ, ನೀವು ವಿಚಾರಗಳನ್ನು ತಿಳಿಯಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ತಾವು ಸಂಬಂಧ ಪಟ್ಟ ಖಾತೆಯ ಮಂತ್ರಿಗಳಾಗಿದ್ದೀರಿ, ತಾವು ಇದರ ಬಗ್ಗೆ ವಿಚಾರ ಮಾಡಬೇಕು, ತಮ್ಮ ಮೇಲೂ ಕೂಡ ಅಲ್ಲಿನ ಜನರಿಗೆ ಸಿಟ್ಟು ಇದೆ.

ಶ್ರೀ ಎಂ. ಚಂದ್ರಶೇಖರ್.—ನಾನು ಆ ಸ್ಥಳಕ್ಕೆ ಎರಡು ಸಾರಿ ಭೇಟಿ ಕೊಟ್ಟಿದ್ದೇನೆ, ಪ್ರತಿನಿತ್ಯ ಹತ್ತಾರು ಜನ ನನ್ನ ಹತ್ತಿರ ಬರುತ್ತಿದ್ದಾರೆ. ನನಗೇನೂ ಅದರ ಬಗ್ಗೆ ಭಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮಗೆ ಧೈರ್ಯವಿಲ್ಲವೆಂದು ನಾನು ಹೇಳಲಿಲ್ಲ, ತಾವು ಈಗಲೂ ಹೋಗುತ್ತೀರಿ, ಆದರೆ ತಾವು ಅಲ್ಲಿಗೆ ಹೋದಾಗ ಜನಗಳು ಮನಬಿಚ್ಚಿ ಮಾತನಾಡುವುದಿಲ್ಲ. ತಾವು ಹೋಗುವುದರಿಂದ ಪ್ರಯೋಜನವಾಗುತ್ತದೆಯೇ ? ತಾವು ಅಲ್ಲಿರತಕ್ಕ ಸಮಸ್ಯೆಯನ್ನು ಹೋಗಲಾಡಿ ಸಬೇಕು. ತಾವು ಸದನದ ಸಮಿತಿಗೆ ವಿಚಾರಣೆ ಮಾಡಲು ಅವಕಾಶ ಮಾಡಿಕೊಡಬೇಕು. ಸದನದ ಸಮಿ ತಿಯನ್ನು ಮಾಡುವುದರಿಂದ ನಿಮಗೇನೂ ನಷ್ಟವಾಗುವುದಿಲ್ಲ. 65 ಜನ ಕಂಟ್ರಾಕ್ಟರುಗಳು ಪೀಸ್ ವರ್ಕ್ ಮೇಲೆ ಕೆಲಸಮಾಡುತ್ತಿದ್ದಾರೆ, ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ರಸ್ತೆ ಕೆಲಸ ಪೂರ್ತಿ ಯಾಗದಿದ್ದರೆ ಏನು ಪ್ರಯೋಜನ ? ನಾಳೆ ಅಲ್ಲಿ ಆಗತಕ್ಕ ನಷ್ಟ ನಿಮ್ಮ ತಲೆಯಮೇಲೆ ಬರುತ್ತದೆ. ಅಲ್ಲಿ ಕೋಟ್ಯಾಂತರ ರೂಪಾಯಿ ಹಣ ಖರ್ಚಾಗುತ್ತದೆ, ಸದನದ ಸಮಿತಿಯನ್ನು ಮಾಡಿ ಅದರಲ್ಲಿ ಎಲ್ಲಾ ಪಕ್ಷದವರೂ ಇರುವಂತೆ ಮಾಡಿ ಒಂದು ಸಲ್ಯೂಷನ್ ಕಂಡುಕೊಳ್ಳಿ. ಜನಗಳನ್ನು ಸಮಸ್ಯೆಗಳ ಸುಳಿ ಯಲ್ಲಿ ಸಿಕ್ಕುವ ಹಾಗೆ ಮಾಡಬೇಡಿ. ಸದನದ ಸಮಿತಿಯನ್ನು ಮಾಡಿದರೆ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಸಹಾಯವಾಗುತ್ತದೆ. ಒಂದೂವರೆ ಲಕ್ಷ ಜನಗಳ ಪ್ರಶ್ನೆ ಇದು. ತಾವು ಹೇಳಬಹುದು ಅಲ್ಲಿ 80 ಮನೆಗಳು ಇದ್ದರೂ ಆ 80 ಮನೆಗಳ ಪೈಕಿ ಎರಡು ಮೂರು ಮನೆಗಳಲ್ಲಿ ಮಾತ್ರ ಜನರು ಇದ್ದರು ಎಂದು ಹೇಳಿ ತಾವು ತಪ್ಪಿಸಿಕೊಳ್ಳಬಹುದು. ಇದು ಗಂಭೀರವಾದ ಪ್ರಶ್ನೆ, ಇದರಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ, ಇದು ಎಲ್ಲರ ಪ್ರಶ್ನೆಯಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಮಾತು ಹೇಳುವು ದಕ್ಕೆ ಇಚ್ಛೆಪಡುತ್ತೇನೆ. ಸದನದ ಸಮಿತಿಯನ್ನು ಮಾಡುವುದಕ್ಕೆ ಇದೊಂದೇ ಪ್ರಶ್ನೆಯಲ್ಲ. ನಾಳೆ ಚಂದ್ರಾಲೇಔಟ್ ತೆಗೆದುಕೊಂಡಾಗ ಇಂತಹ ಪ್ರಶ್ನೆ ಉದ್ಭವವಾಗುತ್ತದೆ. ಅದೇ ರೀತಿನಾಲ್ಕಾರು ಬಡಾವಣೆಗಳನ್ನು ತೆಗೆದುಕೊಳ್ಳುತ್ತೇವೆ ಆಗ ಇಂತಹ ಪ್ರಶ್ನೆಗಳು ಬರುತ್ತವೆ. ಪ್ರತಿಯೊಂದಕ್ಕೂ ಸದ ನದ ಸಮಿತಿಯನ್ನು ಮಾಡಿದರೆ ಪ್ರಾಧಿಕಾರ ಎತಕ್ಕೆ ಇರಬೇಕು ? ಪ್ರಾಧಿಕಾರವನ್ನು ಮುಚ್ಚಿ ಬಿಟ್ಟು ನಾವೇ ಕೆಲಸ ಮಾಡಬೇಕಾಗುತ್ತದೆ. ಪ್ರಾಧಿಕಾರದ ಕಾರ್ಯಕ್ರಮದ ಮಧ್ಯೆ ನಾವು ಪ್ರವೇಶ ಮಾಡುವುದು ಅಷ್ಟು ಸೂಕ್ತವಲ್ಲ.

Sri S. Bangarappa.—If you feel that Bangalore Development Authority is the biggest authority I cannot understand it. There must be some limit for it.

ಶ್ರೀ ಎಂ. ಚಂದ್ರಶೇಖರ್.—ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಾಗ ಇಂತಹ ಸಮಸ್ಯೆ ಗಳು ಬರುತ್ತವೆ. ಅವಶ್ಯಕ ಇದ್ದಾಗ ಸದನದ ಸಮಿತಿಯನ್ನು ಮಾಡೋಣ.

Sri S. Bangarappa.—You please take all sections of this House into confidence. ಸಮಿತಿಯು ಆ ಏರಿಯಾಕ್ಕೆ ಹೋದ ತಕ್ಷಣ ಅಲ್ಲಿರತಕ್ಕ ಕೊರತೆಯನ್ನು ಎಕ್ಸಿ ಕ್ಯೂಟ್ ಮಾಡುವುದಕ್ಕೆ ಆಗುತ್ತದೆಯೆ ? ಯಾವುದೇ ಸಮಿತಿಯನ್ನು ಕಳುಹಿಸಿದರೂ ಕೂಡ You please try to understand the basic matter. ನಾವು ಅಲ್ಲಿ ಹೋಗಿ ಶಾಂತಿ ಸ್ಥಾಪನೆ ಮಾಡಲಿಕ್ಕೆ ಬರುತ್ತದೆ. ಜನಗಳಿಗೆ ಕನ್ವಿನ್ಸ್ ಮಾಡಲಿಕ್ಕೆ ಬರುತ್ತದೆ. ಅಲ್ಲಿ ಏನು ಮಾಡಿದರೆ ಒಳ್ಳೆ

ಯದಾಗುತ್ತದೆ ಎನ್ನುವುದನ್ನು ಕಂಡುಕೊಳ್ಳಬೇಕು. ಅಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಸಹ ಇರಬೇಕು. ಕಾನೂನಿನ ಚೌಕಟ್ಟಿನೊಳಗೆ ಕೆಲಸಮಾಡಬೇಕಾಗುತ್ತದೆ. ಸಮಿತಿಯು ಸ್ಥಳಕ್ಕೆ ಹೋಗತಕ್ಕದ್ದು, ಸಲಹೆ ಕೊಡತಕ್ಕ ರೂಪದಲ್ಲಿ ಹೋಗುತ್ತದೆ. ಅಲ್ಲಿ ಹೋಗಿ ಆರ್ಡರ್ ಮಾಡಿ, ಎಕ್ಸಿಕ್ಯೂಟ್‌ಮಾಡಿ ದೊಡ್ಡ ಬಂಡೆ ಕಲ್ಲನ್ನು ಹಾಕುವುದಕ್ಕೆ ಹೋಗುವುದಿಲ್ಲ. ನೀವು ಏತಕ್ಕೆ ಈ ರೀತಿ ಮಾಡುತ್ತೀರಿ ? If you feel that in spite of this the Bangalore Development Authority is the biggest authority I am yet to understand what kind of thinking you are having. It is incorrect. After all Bangalore Development Authority and all these thinks are the creatures of this House. This House is supreme. ಸರ್ಕಾರವೂ ಕೂಡ ಸದನದ ಒಂದು ಭಾಗವಾಗಿ ಇರುತ್ತದೆ. ನೀವು ಬೇಸಿಕ್ ಮ್ಯಾಟರ್ ಅನ್ನು ಗಮನದಲ್ಲಿಟ್ಟುಕೊಳ್ಳಬೇಕು. House is greater thun anything else. ಸದನದ ಸಮಿತಿಯನ್ನು ಮಾಡುವುದರಿಂದ What is wrong with it ? ಚಂದ್ರಲೇಔಟ್ ತೆಗೆದುಕೊಳ್ಳುತ್ತೇವೆ, ಮತ್ತೊಂದು ತೆಗೆದುಕೊಳ್ಳುತ್ತೇವೆಂದು ಹೇಳಿರುವುದು ಸರಿಯಲ್ಲ, ಯಾವುದೇ ಲೇಔಟ್ ತೆಗೆದುಕೊಂಡರೂ ಬರತಕ್ಕ ಸಮಸ್ಯೆಗಳನ್ನು ಸೆಟಲ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಪ್ರಾಧಿಕಾರದ ನಿಯಮಗಳನ್ನು ಬಿಟ್ಟು ಕೆಲಸಮಾಡುವುದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ನಿಯಮಗಳನ್ನು ಬಿಡಿಯೆಂದು ಹೇಳುತ್ತಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನಾಳೆ ಇದೇ ತರಹ ಸಮಸ್ಯೆಗಳು ಹುಬ್ಬಳ್ಳಿ, ಬೆಳಗಾಂ ಮೈಸೂರು ಮಹಾ ನಗರಸಭೆಗಳಲ್ಲಿ ಬರುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಕರ್ನಾಟಕ ರಾಜ್ಯದ 19 ಜಿಲ್ಲೆಗಳಲ್ಲೂ ಸಹ ಹುಬ್ಬಳ್ಳಿ ಧಾರವಾಡ, ಬೆಳಗಾಂ, ಗುಲ್ಬರ್ಗಾ, ಮಂಗಳೂರು ಮತ್ತು ಮೈಸೂರು ಮಹಾ ನಗರಸಭೆಗಳು ಇಲ್ಲ.

ಶ್ರೀ ಎಂ. ಶ್ರೀನಿವಾಸ್.—ಮಾನ್ಯ ಬಂಗಾರಪ್ಪನವರು ಸದನದ ಸಮಿತಿಯನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ನನ್ನ ಕ್ಷೇತ್ರವಾದ ಉತ್ತರಹಳ್ಳಿ ಭಾಗದಲ್ಲಿ 1 ಲಕ್ಷದ 20 ಸಾವಿರ ಮನೆಗಳು ಇವೆ. ಸಮಿತಿಯನ್ನು ಮಾಡುವುದಾದರೆ ಪ್ರಾಧಿಕಾರ ಏತಕ್ಕೆ ಇರಬೇಕು ? ಪ್ರತಿ ಯೊಂದಕ್ಕೂ ಸದನದ ಸಮಿತಿಯನ್ನು ಮಾಡಿ. ಈಗ ಆಯಾ ಭಾಗದ ಶಾಸಕರನ್ನು ಕರೆದು, ಮಂತ್ರಿಗಳೂ ಸಹ ಸ್ಥಳಕ್ಕೆ ಬೇಟಿ ಕೊಟ್ಟು ಅಲ್ಲಿರತಕ್ಕವರ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನಮಾಡಬೇಕು. ಮನೆಗಳನ್ನು ಒಡೆದರೆ ಅವರು ಪುನಃ ಮನೆ ಕಟ್ಟಿಕೊಳ್ಳುವುದಕ್ಕೆ ಸಾಲ ಕೊಡಿ. ಇಂತಹದ್ದಕ್ಕೆಲ್ಲಾ ಸಮಿತಿಯನ್ನು ಮಾಡಿ ಅಂದರೆ ಪ್ರಾಧಿಕಾರ ಏತಕ್ಕೆ ಇರಬೇಕು. ನನ್ನ ಕ್ಷೇತ್ರದಲ್ಲಿ ಯಾವುದೇ ತಕರಾರು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಯಾವುದೇ ತಕರಾರು ಇಲ್ಲವೆಂದು ಹೇಳುತ್ತಿದ್ದಾರೆ. ಎಲ್ಲೆಲ್ಲಿ ಸರಿಯಿದೆ ಅಂತಹ ಕಡೆ ಸಮಿತಿಗಳನ್ನು ಮಾಡಬೇಕೆಂದು ನಾವು ಹೇಳುತ್ತಿಲ್ಲ.

ಶ್ರೀ ಎಂ. ಶ್ರೀನಿವಾಸ್.—ರಸ್ತೆ ಬರುವ ಕಡೆ ಎಲ್ಲೆಲ್ಲಿ ಮನೆಗಳನ್ನು ಕಟ್ಟಿದ್ದಾರೆ, ಅಂತಹ ಮನೆಗಗನ್ನು ಒಡೆದಾಗ, ಅವರು ಪುನಃ ಮನೆ ಕಟ್ಟಿಕೊಡಲು ಅವರಿಗೆ ಸಾಲ ಕೊಡಿ. ಅವರಿಗೆ ಬೇರೆ ಕಡೆ ನಿವೇಶನ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ರಸ್ತೆ ಬರುವ ಕಡೆ ಮನೆಗಳನ್ನು ಕಟ್ಟಿದ್ದಾರೆಂದು ಒಡೆಯುವುದಕ್ಕೆ ಬದಲು, ಅಲ್ಲಿ ಬರುವ ರಸ್ತೆಯನ್ನು ತಪ್ಪಿಸಿ ಕಟ್ಟಿರತಕ್ಕ ಮನೆಯನ್ನು ಉಳಿಸುವುದಕ್ಕೆ ಪ್ರಯತ್ನಮಾಡಿ. ಮಾನವೀಯತೆಯ ದೃಷ್ಟಿಯಿಂದ ಕಟ್ಟಿರತಕ್ಕ ಮನೆಯನ್ನು ಉಳಿಸುವುದಕ್ಕೆ ಸಮಿತಿಯನ್ನು ಮಾಡಿ ಅಂದರೆ, ಮಾನ್ಯಸದಸ್ಯರು ಭಾಷಣ ಮಾಡುವುದಕ್ಕೆ ಹೊರಟಿದ್ದಾರೆ.

ಶ್ರೀ ಎಂ. ಶ್ರೀನಿವಾಸ್.—ಸಮಿತಿ ಮಾಡುವುದರಿಂದ ರಸ್ತೆ ಹೋಗುವುದನ್ನು ನಿಲ್ಲಿಸುವುದಕ್ಕೆ ಆಗುತ್ತದೆಯೆ ?

ಶ್ರೀ ಎಂ. ಚಂದ್ರಶೇಖರ್.—ನಾವು ಅದರ ಬಗ್ಗೆ ಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದೇವೆ. ಎರಡು ತಿಂಗಳಿಂದ ಈ ಸಮಸ್ಯೆ ಪ್ರಾರಂಭವಾಗಿದೆ. ಜನಗಳಿಗೆ ಈಗ ತಿಳುವಳಿಕೆ ಬಂದಿದೆ. ಬಡಾವಣೆ

ಗಳನ್ನು ಮಾಡುವಾಗ ಜನಗಳಿಗೆ ಕೊಡತಕ್ಕ ನಿವೇಶನಗಳನ್ನು ಖಾಯಂ ಮಾಡಬೇಕಾಗುತ್ತದೆ. ನಾನು ಕೂಡ ಪ್ರಾಧಿಕಾರದವರನ್ನು ಅಲ್ಲಿಗೆ ಕಳುಹಿಸಿಕೊಡುತ್ತಿದ್ದೇನೆ....

5-30 p. m.

ಶ್ರೀ ಎಂ. ವೀರಪ್ಪಮೋಯ್ಲಿ.—ಈಗ ಈ ವ್ಯವಹಾರವನ್ನು ಬರೀ ಬಿ. ಡಿ. ಎ. ಮತ್ತು ಅಲ್ಲಿನ ಜನರಿಗೇ ಬಿಟ್ಟುಬಿಡೋಣವೋ ? Do you want that ? You will have to own the responsibility.

ಶ್ರೀ ಎಂ. ಚಂದ್ರಶೇಖರ್.—ನಾನು ಇದನ್ನು ಮಾಡದೇ ಇರಲು ಸಾಧ್ಯವಾಗುವ ಸಂದರ್ಭದಲ್ಲಿ ಬಿ.ಡಿ.ಎ. ಮತ್ತು ಸರ್ಕಾರ ಪ್ರಯತ್ನ ಮಾಡಿದರೂ ಕೂಡ ಸಫಲವಾಗದೇ ಹೋದ ಸಂದರ್ಭದಲ್ಲಿ....

ಶ್ರೀ ಎಂ. ವೀರಪ್ಪಮೋಯ್ಲಿ.—You should not treat this as a normal administrative matter. ಇದನ್ನು ದಯಮಾಡಿ ನೀವು ತಿಳಿದುಕೊಳ್ಳಬೇಕು. ಏಕೆಂದರೆ 1970ರಲ್ಲಿ ಪ್ರಿಲಿಮಿನರಿ ನೋಟಿಫಿಕೇಶನ್ ಆದದ್ದು, 1976ರಲ್ಲಿ ಪುನಃ ಡಿನೋಟಿಫೈ ಮಾಡಿದ್ದಾರೆ. ಫೆಬ್ರುವರಿ 1980ರಲ್ಲಿ ಮತ್ತೆ ಡಿನೋಟಿಫೈ ಆಗಿದೆ. ಇವರ ಕಾಲದಲ್ಲಿ ಎಕ್ಸಿಕ್ಯೂಟ್ ಮಾಡಲಿಕ್ಕೆ ಆಗಲಿಲ್ಲ. ಫೆಬ್ರುವರಿ 1984ರಲ್ಲಿ ಎಲ್ಲಾ ಜಾಗವನ್ನು ಸೇರಿಸಿ ನೋಟಿಫೈ ಮಾಡಿದ್ದಾರೆ. Do you think that BDA officers are in a position to handle it ? Public will have to appreciate this action.

ಶ್ರೀ ಎಸ್. ಬಂಗಾರಪ್ಪ.—ಜನ ವಿರೋಧ ಮಾಡಿರುವುದನ್ನು ನೋಡಿದರೆ ಬಿ.ಡಿ.ಎ. ನವರು ಹೋಗಿ ಇದನ್ನು ಸೆಟಲ್ ಮಾಡತಕ್ಕ ಪರಿಸ್ಥಿತಿ ಇಲ್ಲ. To cool down their tempers of the people of that area ಸಮಿತಿ ಹೋಗಿ ನಾವೇನೂ ಸಭೆ ಮಾಡಬೇಕೆಂದು ಹೇಳಿಲ್ಲ. ಸ್ಪಾಟ್‌ಗೆ ಹೋಗಿ ನಿರ್ಣಯ ತೆಗೆದುಕೊಳ್ಳಬೇಕು. ಇದರಿಂದ ಬಿ. ಡಿ. ಎ. ಘನತೆ ಹೆಚ್ಚಾಗುತ್ತದೆ. ಇದನ್ನು ತೆಗೆದು ಕೊಳ್ಳಡೆ If you just stand on certain things, I cannot help.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಅನ್ಯಾಯ ಆಗುವುದಕ್ಕೆ ಬಿಡುವುದಿಲ್ಲ, ಯಾವುದೇ ಮನೆಯನ್ನೂ ಒಡೆಯುವುದಿಲ್ಲ, ಪರಿಹಾರ ಕೊಡುತ್ತೇವೆ ಎಂಬ ಮಾತನ್ನು ಪದೇಪದೇ ಹೇಳುತ್ತಿದ್ದಾರೆ. ವಿರೋಧ ಪಕ್ಷದವರ ಅಪೇಕ್ಷೆ ಕೂಡ ಇದೇ ಇರುವುದು. ಕೊನೆಪಕ್ಷ ಸದನದ ಸಮಿತಿ ಮಾಡಬೇಕಾದರೆ ಸದನ ಎಲ್ಲಾ ಪಕ್ಷದ ಒಬ್ಬೊಬ್ಬರನ್ನು ಕರೆದು ಅಲ್ಲಿ ಏನು ನಡೆಯುತ್ತಿದೆ, ಎಂಬುದನ್ನು ತಿಳಿಸಿ, ಅಲ್ಲಿ ಏನಾದರೂ ತೊಂದರೆ ಇದ್ದರೆ....

ಶ್ರೀ ಎಂ. ವೀರಪ್ಪಮೊಯ್ಲಿ.—We will not be a party to it. We are sorry. ಏನಿದು ಒಬ್ಬೊಬ್ಬರನ್ನೂ ತೆಗೆದುಕೊಂಡುಹೋಗಿ....

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಇಷ್ಟು ಹೊತ್ತು ಚರ್ಚೆ ಮಾಡಿದ ಉದ್ದೇಶ ಏನು? ಅಲ್ಲಿರುವಂಥ ಜನಕ್ಕೆ ತೊಂದರೆ ಆಗಬಾರದು. ಸದನದಲ್ಲಿ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ರೋಡ್ ಆಗಿರುವುದನ್ನು ಬಿಟ್ಟು ಬೇರೆ ಮನೆಗಳನ್ನು ಒಡೆಯುವುದಿಲ್ಲವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಹೇಳುವುದನ್ನು ಒಪ್ಪಿಕೊಳ್ಳೋಣ ;

ಶ್ರೀ ಜೆ. ಡಿ. ಸೋಮಪ್ಪ.--ಮಾನ್ಯ ಅಧ್ಯಕ್ಷರೇ,

ಉಪಾಧ್ಯಕ್ಷರು.--ಸ್ವಲ್ಪ ತಾಳಿ. ಮಂತ್ರಿಗಳು ಏನು ಉತ್ತರ ಹೇಳುತ್ತಾರೋ ನೋಡೋಣ.

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದ ಹಾಗೆ ಕನ್‌ಸಲ್ಟ್ ಮಾಡುವುದು ಸುಲಭ. ಇದಕ್ಕೆ ನಾವು ನಿಮ್ಮ ಛೇಂಬರ್‌ಗೆ ಬರುವುದಿಲ್ಲ. ಚರ್ಚೆಗೆ ಬರಲಿಕ್ಕೆ ನಾನು ತಯಾರು ಇಲ್ಲ. Why should we go there ? We have suggested. If you don't agree we are prepared to face the consequences. ಯಡಿಯೂರಪ್ಪನವರೇ, ನೀವ್ಯಾಕೆ ಸಿಕ್ಕಿಹಾಕಿಕೊಳ್ಳುತ್ತೀರಿ ? ಕನ್‌ಸಲ್ಟ್ ಮಾಡುವುದು ಛೇಂಬರ್‌ನಲ್ಲಿ. ಸ್ಪಾಟ್‌ಗೆ ಹೋಗಿ ಪರಿಶೀಲನೆ ಮಾಡತಕ್ಕಂಥ ವಿಚಾರ ನಾನು ಹೇಳಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.--ಯಾವುದೇ ವ್ಯಕ್ತಿಗೂ ತೊಂದರೆ ಕೊಡುವುದಿಲ್ಲವೆಂದು ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಆಶ್ವಾಸನೆ ಕೊಟ್ಟಿರುವಾಗ, ಅವರೇನಾದರೂ ಈ ಆಶ್ವಾಸನೆಗೆ ವಿರುದ್ಧವಾಗಿ ನಡೆದರೆ ಈ ಸದನದ ಈ ಭಾಗದಲ್ಲಿ ಇರುವಂಥವರು ಅವರಿಗೆ ಸಹಕಾರ ಕೊಡುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಇಲ್ಲಿ ನಾನು ವಿಶದೀಕರಣ ಕೊಡಬೇಕು. ಒಬ್ಬೊಬ್ಬರಲ್ಲಿ ಅರ್ಥದಲ್ಲಿ ವ್ಯತ್ಯಾಸ ಆಗಿರಬಹುದು. ಒಂದು ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿರುವುದು ಎಂದರೆ ಆ ಬಡಾವಣೆಗಳನ್ನು ಮಾಡುವಾಗ ಒಬ್ಬೊಬ್ಬರು 200-300 ಅಡಿ 100-150 ಅಡಿ ಜಾಗವನ್ನು ಹೊಂದಿದ್ದು ಅದು ತಮ್ಮದು ಎಂದು ಹೇಳುವಂಥ ಕಾಲದಲ್ಲಿ, ನಿವೇಶನಗಳನ್ನು ಯೋಜನಾಬದ್ಧವಾಗಿ ಮಾಡುವುದು ನಮ್ಮ ಉದ್ದೇಶ. ಆ ಪ್ರದೇಶದಲ್ಲಿ 30-40 ಅಡಿ ಅಥವಾ 40-60 ಅಡಿ ನಿವೇಶನಗಳನ್ನು ಮಾಡುತ್ತಿದ್ದೇವೆ. ಮನೆಗಳನ್ನು ಕಟ್ಟಿಕೊಂಡಿರುವಂತಹ ಆ ಪ್ರದೇಶದಲ್ಲಿ ಏನು ನಿವೇಶನಗಳನ್ನು ಮಾಡುತ್ತೇವೆ, ಅದನ್ನು ಈ ಸೈಜ್‌ಗೆ ಅನುಗುಣವಾಗುವ ಹಾಗೆ ಮಾಡುತ್ತೇವೆಯೇ ಹೊರತಾಗಿ, 100-150 ಅಡಿ ಆಗಿರುವುದನ್ನು ರೆಗ್ಯುಲೇಟ್ ಮಾಡಿ ಎಂದರೆ ಹೇಗೆ ಸಾಧ್ಯ ?

ಶ್ರೀ ಬಿ. ಎಸ್. ಎಡಿಯೂರಪ್ಪ.--ಅಲ್ಲಿ ಈಗಾಗಲೇ ಮನೆಗಳನ್ನು ಕಟ್ಟಲಾಗಿದೆ. ಅದನ್ನು ಏನು ಮಾಡುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—100-150 ಅಡಿ ಅಳತೆಯ ನಿವೇಶನದಲ್ಲಿ ಅಂಥವನು ಯಾರು ? ಆ ಪ್ರದೇಶದಲ್ಲಿ ಅಡ್ಜಸ್ಟ್ ಆಗುವ ರೀತಿಯಲ್ಲಿ ನಿವೇಶನ ಕೊಡುವುದು ಒಂದು. ಹಾಕಿಕೊಂಡಿರುವುದನ್ನು ರಿಕನ್ವೇ ಮಾಡುವುದು ಅಲ್ಲ. ರಿಅಲಾಟ್‌ಮೆಂಟ್ ಮಾಡುವಾಗ ಅನೇಕ ವರ್ಷಗಳಿಂದ ಕಾದುಕೊಂಡಿರುವ ಜನರಿಗೆ ಏನು ನ್ಯಾಯ ಸಿಗಬೇಕೋ, ಅಂತಹ ನ್ಯಾಯ ಅವರಿಗೆ ಸಿಗಬೇಕು.

ಶ್ರೀ ಎಂ. ವೀರಪ್ಪಮೋಯ್ಲಿ.--ಅದೇ ಜಾಗವನ್ನು ಏತಕ್ಕೆ ಹುಡುಕುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಈ ರೀತಿ ಮಾಡಿದರೆ ಅಲ್ಲಿ ಐದು ಸಾವಿರ ನಿವೇಶನಗಳನ್ನು ಮಾಡಬಹುದು. ಆದರೆ ನಾಲ್ಕು ಸಾವಿರ ಜನರಿಗೆ ಅಲ್ಲಿರುವ ಪ್ರದೇಶದಲ್ಲಿ ನಿವೇಸನಗಳನ್ನು ಕೊಡಬಹುದಲ್ಲ ? 30-40 ಅಥವಾ 40-60 ರಂತೆ ಮಾಡುವ ರೀತಿಯಲ್ಲಿ ರಿಅಲಾಟ್‌ಮೆಂಟ್ ಮಾಡುವಾಗ ಕಂಡೀಶನ್ ಏನು ಇರುತ್ತದೆ. ಯಾವ ರೀತಿ ಬೇರೆಯವರಿಗೆ ಹತ್ತು ವರ್ಷ ಪರಭಾರೆ ಮಾಡಬಾರದು, ಏನೇನು ನಿಯಮಗಳನ್ನು ಹತ್ತು ವರ್ಷಗಳಿಂದ ಹಣ ಕೊಟ್ಟಿರುವ ಜನಕ್ಕೆ ಹಾಕುತ್ತೇವೆಯೋ, ಈ ನಿಯಮಗಳು ಅವರಿಗೂ ಅನ್ವಯ ಆಗುವ ಹಾಗೆ ಮಾಡಬೇಕು.

ಶ್ರೀ ಎಂ. ವೀರಪ್ಪಮೋಯ್ಲಿ.--ರಸ್ತೆಯನ್ನು ಈಗ ಹೊಸದಾಗಿ ಮಾಡಿ. ರಸ್ತೆ ಇರುವ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದರೆ ಹೇಗೆ ? ಅವರಿಗೆ ಬೇಕಾದಲ್ಲಿ ಅವಕಾಶ ಕೊಡಬೇಕು. ಒಪ್ಪಿಗೆ ತೆಗೆದುಕೊಂಡು ಮಾಡಿಕೊಡುತ್ತೇವೆ. ಸರ್ಕಾರ ನಾವು ಮತ್ತು ಶಾಸಕರು ಮಾನ್ಯ ಸೂರ್ಯನಾರಾಯಣ ರಾವ್ ಮತ್ತು ಶ್ರೀನಿವಾಸ್ ಅವರು ಇದ್ದಾರೆ. ನಾವು ಪ್ರಯತ್ನಮಾಡಿ ಸಫಲವಾಗದೇ ಇದ್ದ ಪಕ್ಷದಲ್ಲಿ ಈ ಮನೆಗೆ ಬಂದು ಮುಂದಿನ ನಿರ್ದೇಶನ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—The Hon.ke Minister has introduced another subject. ಈಗ ನಾವು ಕಟ್ಟಿರತಕ್ಕಂಥ ಮನೆಗಳು ಉಳಿಯುತ್ತವೆ ಎಂದು ಭಾವಿಸಿದ್ದೇವೆ. ನಾನು ಅಭಿಪ್ರಾಯ ಪಟ್ಟಿದ್ದು ಎಲ್ಲೆಲ್ಲಿ ರೋಡ್‌ಗಳು ಬರುತ್ತವೆ, ಅಲ್ಲಿ ಮನೆ ಇದ್ದರೆ ಅದಕ್ಕೆ ಆಲ್ಟರ್‌ನೇಟಿವ್ ಮಾಡಬೇಕೆಂಬ ಸಲಹೆಯನ್ನು ಒಪ್ಪಿಕೊಂಡೆವು.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರಿಗೆ ನೆನಪು ಮಾಡಿಕೊಡುತ್ತೇನೆ. 100, 220, 300, 400 ಅಡಿ ಸೈಟು ಮಾಡಿಕೊಂಡಿದ್ದರಿಂದ ಆತ ಅದಕ್ಕೆ ತಕ್ಕ ತೆರಿಗೆ ಕೊಡುತ್ತಾನೆ. ಈ ಬಗ್ಗೆ ಮುಂದೆ ಅರ್ಬನ್ ಸಿಲೀಂಗ್ ಪ್ರಕಾರ ಎಷ್ಟು ಇಟ್ಟುಕೊಳ್ಳಬೇಕೋ ಎಷ್ಟು ಬಿಡಬೇಕೋ ಅನ್ನುವುದನ್ನು ನೋಡಿಕೊಂಡು ಅವನು ಮನೆ ಕಟ್ಟಿಕೊಂಡರೆ....

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ತಮಗೆ ಗೊತ್ತಿದೆ, ಅರ್ಬನ್ ಸೀಲಿಂಗ್ ಲಿಮಿಟ್ ಪ್ರಕಾರ ಒಬ್ಬನಿಗೆ ಒಂದು ಸಾವಿರ ಸ್ಕ್ವೇರ್‌ಮೀಟರ್ ಜಾಗ ಇರಬಹುದು ಎಂದು ಅದನ್ನು ನೋಡಿಕೊಂಡು ಅವನು ಮನೆ ಕಟ್ಟಿಕೊಳ್ಳುತ್ತಾನೆ. ಶ್ರೀ ರಾಮಕೃಷ್ಣ ಅಂತಹವರು 100—100 ಅಡಿ ನಿವೇಶನ

ಪೂರ್ತಿ ಮನೆ ಕಟ್ಟಿಕೊಂಡರೆ, ಬೇರೆಯವರು, ನಾವು ನೀವೂ, ಕಟ್ಟಿಕೊಳ್ಳುವುದಕ್ಕಾಗುತ್ತದೆಯೇ ? ಕೆಲವರು ಉಳಿದ ಖಾಲಿ ನಿವೇಶನವನ್ನು ಹಾಗೆಯೇ ಬಿಟ್ಟುಕೊಂಡಿರುತ್ತಾರೆ. ಆದುದರಿಂದ ನಾವೂ ನೀವು ದೊಡ್ಡ ಸೈಟುಗಳಲ್ಲಿ ಮನೆಯನ್ನೇ ಕಟ್ಟುವುದಕ್ಕಾಗುವುದಿಲ್ಲ. ಆದುದರಿಂದ ತಾವು ಹೇಳಿದ ಪ್ರಶ್ನೆಯೇ ಇದರಲ್ಲಿ ಬರುವುದಿಲ್ಲ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗಾಗಲೇ ಸಾಕಷ್ಟು ಉತ್ತರ ಕೊಟ್ಟಿದ್ದಾರೆ. ಈ ಸೂಚನೆಗೆ ಕಾಲಮಿತಿ ಇರುವುದು ಒಂದು ಗಂಟೆ. ಆದರೆ ಅದು ಒಂದೂಮುಕ್ಕಾಲು ಗಂಟೆಯವರೆಗೂ ಚರ್ಚೆಯಾಗಿದೆ. ಇನ್ನು ಸಾಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬಿ. ಎಸ್. ಯಡಿಯೂರಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವೇ ಬರಲಿಲ್ಲ. ಈವೊತ್ತು ಯಾರಾದರೂ ಕೂಡ 100 ಅಡಿ 200 ಅಡಿ ಜಾಗ ಇಟ್ಟುಕೊಂಡಿದ್ದರೆ ಅವರು ಸ್ವಲ್ಪ ಭಾಗದಲ್ಲಿ ಮನೆಕಟ್ಟಿಕೊಂಡಿದ್ದರೆ, ಇನ್ನು ಉಳಿದ ಜಾಗವನ್ನು ನಮಗೆ ಬಿಟ್ಟುಕೊಡಿ ಎಂದರೆ ಇದು ಯಾವ ಸಾಮಾಜಿಕ ನ್ಯಾಯವಾಗುತ್ತದೆ ಸ್ವಾಮಿ ?

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಹಾಗಾದರೂ ಯಾರಾದರೂ 300 ಅಡಿ ಜಾಗಕ್ಕೆ ಬೇಲಿ ಹಾಕಿಕೊಂಡಿದ್ದರೆ ಅದನ್ನು ಅವರಿಗೇನೇ ಕೊಡಬೇಕು ಎಂದೇ ನಿಮ್ಮ ಇಷ್ಟ.

ಶ್ರೀ ಎಸ್. ಬಂಗಾರಪ್ಪ.—ಬಡವರು ಉದ್ಧಾರವಾಗಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಹೇಳುವುದನ್ನೂ ಕೂಡ ತಾವು ಸ್ವಲ್ಪ ಅಧ್ಯಯನ ಮಾಡಿದರೆ ತಮಗೆ ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ಹೀಗೆ ಇದನ್ನು ಮುಂದುವರೆಸಿಕೊಂಡು ಹೋದರೆ ಇದು ಮುಗಿಯುವುದಿಲ್ಲ. ನೀವು ಈ ಸದನದ ಒಂದು ಸಮಿತಿ ಮಾಡಿ ಎಂದು ಹೇಳುತ್ತೀರಾ ? ಅದಕ್ಕೆ ಸರ್ಕಾರದವರು ಒಪ್ಪುತ್ತಾ ಇಲ್ಲವಲ್ಲಾ ?

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಸರ್ಕಾರದವರು ಅದನ್ನೆಲ್ಲಾ ನಿರ್ವಹಿಸಿಕೊಂಡು ಶಕ್ತಿ ಇರುವುದರಿಂದ ಅವರು ಇದಕ್ಕೆ ಒಪ್ಪುವುದಿಲ್ಲ. ಅವರು ಈಗಾಗಲೇ ಸಾಕಷ್ಟು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಇವರು ಸಮಾಜವಾದದ ಬಗ್ಗೆ ಮಾತನಾಡುತ್ತಾರೆ.

ಉಪಾಧ್ಯಕ್ಷರು.—ಸಮಾಜವಾದದ ಬಗ್ಗೆ ಚರ್ಚೆ ಮಾಡುವುದನ್ನು ಇಲ್ಲಿ ಬಿಟ್ಟುಬಿಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಸಮಾಜವಾದದ ಬಗ್ಗೆ ಚರ್ಚೆ ಮಾಡುವುದಕ್ಕೆ ರೆಡಿ ಆಗಿದ್ದರೆ ನಾವೂ ಕೂಡ ರೆಡಿ ಆಗುತ್ತೇವೆ. ಚರ್ಚೆ ಮಾಡೋಣ. ನಾನು ಹೇಳುವುದು ಇಷ್ಟೆ. ಅವರ ಹತ್ತಿರ ಇರುವ ಸೈಟು ಉದ್ದ ಇದ್ದರೆ ಅದನ್ನು ಖಾಯಂ ಮಾಡಿ ಎಂದು ಹೇಳುತ್ತಾ ಇಲ್ಲ. ಒಂದು ಲೇಔಟ್ ಮಾಡಿದಾಗ ಎಲ್ಲಿ ರೋಡ್ ಬರಬೇಕೋ ಅಲ್ಲಿ ಏನಾದರೂ ಉದ್ದವಾದ ಸೈಟು ಉಳಿದುಕೊಂಡಿದ್ದರೆ ಅದನ್ನು ಹೇಗೆ ಅರ್ಥ ಮಾಡುವುದಕಾಗುತ್ತದೆ ? ಇದು ನನ್ನ ಪ್ರಶ್ನೆ. ನಿಜವಾಗಿಯೂ ಕೂಡ ಬಡವರಿಗೆ ಮನೆ ಕಟ್ಟಲು 30 ಇಂಟು 40 ಅಡಿ ಸೈಟು ಕೊಡುವುದಾದರೆ ಬಹಳ ಸಂತೋಷ. ಬಡವರ ಬಗ್ಗೆ ಅಷ್ಟು ಕಳಕಳಿ ಇರತಕ್ಕಂಥಾವರು ಚಿಕ್ಕಮಾರನಹಳ್ಳಿ ಯಲ್ಲಿ ಕಟ್ಟಿರುವ ಮನೆಗಳನು ಬುಲ್‌ಡೋಜರ್ ತೆಗೆದುಕೊಂಡು ಹೋಗಿ ಒಡೆಸಿದರಲ್ಲಾ ಅದರಲ್ಲೇ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ತಾವು ಈಗ ಚಿಕ್ಕಮಾರನಹಳ್ಳಿಗೆ ಹೋಗಿ ಆ ಜನರನ್ನು ಕೇಳಿದರೆ ಅವರು ಏನು ಉತ್ತರ ಹೇಳುತ್ತಾರೆ ಅನ್ನುವುದು ಗೊತ್ತಾಗುತ್ತದೆ.

(ಗೊಂದಲ)

Sri S. Bangarappa.–It is a operation demolition and the Hon'ble Minister has justified whatever action that has been taken by the BDA. That was the first demolition started soon after the Janata Government came to power. ಈ ಸಮಾಜವಾದದ ಬಗ್ಗೆ ತಾವು ತಿಳಿದುಕೊಂಡು ಚೆನ್ನಾಗಿ ಕೆಲಸ ಮಾಡುತ್ತಾರೆ. ಎಂದು ನಮಗೆ ಮೊದಲು ಅನಿಸಿತು. ಅದಕ್ಕೆ ನಮ್ಮ ಬೆಂಬಲವೂ ಸಿಕ್ಕಿತು. ಈ ಸಮಾಜವಾದದಂತೆ ಬಡವರೆಲ್ಲರಿಗೂ ಕೂಡ 30–40 ಅಡಿ ಸೈಟುಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ ಪಡುತ್ತಿದ್ದೆ. ಅದು ಬಿಟ್ಟು ಚಿಕ್ಕಮಾರನಹಳ್ಳಿಯಲ್ಲಿ ಬುಲ್‌ಡೋಜರ್ ತೆಗೆದುಕೊಂಡು ಹೋಗಿ ಅವರ ಮನೆಗಳನ್ನು ಒಡೆಸಿದರಲ್ಲಾ ಇದರಿಂದ ನೀವು ಬಡವರನ್ನು ಯಾವರೀತಿಯಾಗಿ ಉದ್ಧಾರ ಮಾಡುತ್ತೀರಿ

ಎನ್ನುವುದು ಗೊತ್ತಾಯಿತು. ಹೀಗಿರುವಾಗ ನೀವು ಯಾವರೀತಿಯಾದ ಸಮಾಜವಾದತಂದು, ಆ ಜನರಿಗೆ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುತ್ತೀರಿ ಅನ್ನುವುದೇ ನನ್ನ ಪ್ರಶ್ನೆ ?

ಉಪಾಧ್ಯಕ್ಷರು.--ಅದಕ್ಕೆ ಏನಾದರೂ ಉತ್ತರ ಕೊಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನಾನು ಮೊದಲೇ ಉತ್ತರ ಹೇಳಿದ್ದೇನೆ.

Mr. Deputy Speaker.—Discussion concluded. Now, the House stands adjourned to meet again tomorrow at 11-00 A.M.

**The House adjourned fifty minutes past five of the clock to meet again on Thursday the 12th April 1984 at 11-00 a.m.**

—o—